بِسْمِ اللهِ الرَّحْمٰنِ الرَّحِيْم نَحْمَدُهٗ وَنُصَلِّی عَلٰی رَسُوْلِہِ الْکَرِیْم وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಸಂಚಿಕೆ: 22

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

30 ಮೇ 2024, 30 ಹಿಜ್ರತ್ 1403 ಹಿಜರಿ ಶಮ್‌ಸಿ,
21 ಝುಲ್-ಖಅ್‌ದ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ لَيَسْتَخْلِفَنَّهُمْ فِي الْاَرْضِ كَمَا اسْتَخْلَفَ الَّذِيْنَ مِنْ قَبْلِهِمْ

(ಅನ್ನೂರ್: 56)

ಅಂದರೆ: ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಸಮಯಾಧಾರಿತ ಸಂಪತ್ತು ಖರ್ಚು ಮಾಡುವವರ ಮತ್ತು ಇತರರಿಗೆ ಜ್ಞಾನ ಕಲಿಸುವವರ ಶ್ರೇಷ್ಠತೆ.**

**(1409)** ಹಝ್ರತ್ ಇಬ್ನು ಮಸ್‌ಊದ್(ರ) ವರದಿ ಮಾಡುತ್ತಾರೆ. ಅವರು ಹೇಳಿದರು. ನಬಿ(ಸ) ಅವರಿಂದ ಆಲಿಸಿರುತ್ತೇನೆ. ಅವರು ನುಡಿದರು. ಅಸೂಯೆ ಪಡಬಾರದು. ಆದರೆ ಇಬ್ಬರ (ಮನುಷ್ಯರ) ಮೇಲೆ ಮಾತ್ರ. ಒಂದು, ವ್ಯಕ್ತಿಯೊಬ್ಬನಿಗೆ ಅಲ್ಲಾಹನು ಸಂಪತ್ತು ನೀಡಿರಬೇಕು ಮತ್ತು ಅದನ್ನು ಸಾಂಧರ್ಭಿಕವಾಗಿ ಖರ್ಚು ಮಾಡುವ ಭಾಗ್ಯ ಪಡೆದಿರಬೇಕು. ಮತ್ತು ಆ ವ್ಯಕ್ತಿ ಅವನಿಗೆ ಅಲ್ಲಾಹನು ಸರಿಯಾದ ಜ್ಞಾನ ನೀಡಿರಬೇಕು ಅವನು ಅದರ ಮೇಲೆ ಸ್ವಯಂ ಪಾಲಿಸುವವನಾಗಬೇಕು. ಮತ್ತು ಜನರಿಗೆ ಸಹ ಕಲಿಸಬೇಕು.

**ಸದ್‌ಖಾ ಝುಕಾತ್ (ದಾನ) ಪರಿಶುದ್ಧ ಸಂಪತ್ತಿನಿಂದ ನೀಡಬೇಕು.**

**(1410)** ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್ (ಸ) ನುಡಿದರು. ಯಾವ ವ್ಯಕ್ತಿ ತನ್ನ ಪರಿಶುದ್ಧ ಸಂಪತ್ತಿನಿಂದ ಒಂದು ಖರ್ಜೂರದಷ್ಟು ಸದ್‌ಖಾ ನೀಡುವನೋ ಅಲ್ಲಾಹನು ಪರಿಶುದ್ಧ ವಸ್ತುವೇ ಸ್ವೀಕರಿಸುವನು, ಅಲ್ಲಾಹನು ಆ ಸದ್‌ಖಾವನ್ನು ತನ್ನ ಬಲಗೈಯಿಂದ ಸ್ವೀಕರಿಸುವನು ಮತ್ತು ಸದ್‌ಖಾ ನೀಡುವವನಿಗೆ ಇನ್ನಷ್ಟು ಅನುಗ್ರಹಿಸುತ್ತಾನೆ. ಯಾವ ರೀತಿ ಒಬ್ಬನು ತನ್ನ ಹಸುವನ್ನು ಸಾಕಿರುತ್ತಾನೆ. ಆ ಸದ್‌ಖಾ ಪರ್ವತ ಸಮಾನವಾಗುತ್ತದೆ. **(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಝುಕಾತ್, ಮುದ್ರಣ 2008 ಖಾದಿಯಾನ್)**

ಅಲ್ಲಾಹನು ಕಳುಹಿಸಿದ ಸುಧಾಕರನ್ನು ಮತ್ತು ಅವನ ಸ್ನೇಹಿತರನ್ನು ವಿರೋದಿಸುವವರಿಗೆ ಮತ್ತು ಪೀಡನೆ ನೀಡುವವರಿಗೆ ಪರಿಣಾಮ ನೆಟ್ಟಗಿರುವುದಿಲ್ಲ.
ಯಾವ ವ್ಯಕ್ತಿ ಅವರಿಗೆ ಪೀಡನೆ ನೀಡಿ ಮತ್ತು ದುಃಖ ಕೊಟ್ಟು ನಾನು ಆರಾಮವಾಗಿರಬಹುದೆಂದು ಯೋಚಿಸುವನೋ ಅವನು ಕಠಿಣವಾದ ತಪ್ಪು ಹಾದಿಯಲ್ಲಿರುವನು ಮತ್ತು ಆತ್ಮವಂಚನೆ ಮಾಡಿಕೊಳ್ಳುವವನಾಗುತ್ತಾನೆ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಇದು ಕಾಯಿದೆಯ ಮಾತಾಗಿದೆ, ವ್ಯಕ್ತಿಯೊಬ್ಬನು ಒಬ್ಬನನ್ನು ಪ್ರೀತಿಸುವವನಾದರೆ, ತನ್ನ ಮಕ್ಕಳಂತೆ ಪ್ರೀತಿಸುವವನಾದರೆ, ಅವನಿಗೆ ನೀನು ಸಾಯಿ ಅಥವಾ ಅದೇ ರೀತಿಯ ಮನನೋಯಿಸುವ ಮಾತುಗಳನ್ನಾಡಿದರೆ, ಆ ವ್ಯಕ್ತಿ ಹೇಗೆ ತಾನೆ ಸಂತೋಷಪಡುವನು. ಯಾವನ ತಂದೆ ತನ್ನ ಪುತ್ರನಿಗಾಗಿ ಶಾಪ ಹಾಕುತ್ತಿರುವನು ಮತ್ತು ದು:ಖ ನೀಡುವ ರೀತಿಯ ಮಾತನ್ನಾಡುವನು, ಇಂತಹ ವ್ಯಕ್ತಿಯೊಂದಿಗೆ ಹೇಗೆ ಪ್ರೀತಿ ಮಾಡಲು ಸಾಧ್ಯ? ಅದೇ ರೀತಿಯಲ್ಲಿ ಅಲ್ಲಾಹನ ಸ್ನೇಹಿತರು ಸಹ, ಅಲ್ಲಾಹನ ಮಕ್ಕಳ ರೀತಿಯ ಪ್ರೀತಿ ಹೊಂದುವರು. ಏಕೆಂದರೆ ಅವರು ದೇವೇಚ್ಛೆಯ ವಸ್ತ್ರಗಳನ್ನು ಕಳಚಿ ಅಲ್ಲಾಹನ ಮಡಿಲಿಗೆ ಸೇರಿದವರಾಗುತ್ತಾರೆ. ಅಲ್ಲಾಹನೇ ಅವನ ಪೋಷಕ ಹಾಗೂ ರಕ್ಷಕನಾಗಿರುತ್ತಾನೆ. ಅವನು ಅವರಿಗಾಗಿ ಸ್ವಾಭಿಮಾನ ಹೊಂದುವವನಾಗಿರುತ್ತಾನೆ. ಯಾವನೇ ವ್ಯಕ್ತಿ (ಅವನು ಎಂತಹ ನಮಾಝ್ ಅನುಷ್ಠಿಸುವವನಾಗಲಿ, ಉಪವಾಸ ಮಾಡುವವನಾಗಲಿ) ಅವರನ್ನು ವಿರೋಧಿಸುವವರಾಗಿದ್ದರೆ ಮತ್ತು ಪೀಡನೆಗೆ ಸಿದ್ಧನಾದರೆ ಅಲ್ಲಾಹನ ಸ್ವಾಭಿಮಾನ ಜಾಗೃತಗೊಳ್ಳುತ್ತದೆ ಮತ್ತು ವಿರೋಧಿಸುವವರ ಮೇಲೆ ಅವರ ಪ್ರಕೋಪ ಉಂಟಾಗುತ್ತದೆ. ಏಕೆಂದರೆ ಅವರು ಅವನ ಸ್ತ್ರೀಯರನ್ನು ದು:ಖ ಕೊಡಬಯಸಿದ್ದಾರೆ. ಆ ಸಮಯ ಅವರಿಗೆ ನಮಾಝ್ ಸಹ ಅವರ ಸಹಾಯಕ್ಕೆ ಬಾರದು. ಉಪವಾಸವು ಸಹಾಯಕ್ಕೆ ಬಾರದು. ಏಕೆಂದರೆ ನಮಾಝ್ ಮತ್ತು ಉಪವಾಸ ಅವನಿಗೆ ರಾಜಿ ಮಾಡುವ ಉದ್ದೇಶದಿಂದಿತ್ತು. ಅದನ್ನು ಬೇರೆ ಉದ್ದೇಶದಿಂದ ಅಸಂತುಷ್ಟ ಪಡಿಸಿದಂತಾಯಿತು. ಹಾಗಾಗಿ ಹೇಗೆ ತಾನೇ ಅವರಿಗೆ ಅವನ ಸಂಪ್ರೀತಿ ದೊರೆಯುಲು ಸಾಧ್ಯ. ಮೂರ್ಖನಾದ ಅವರು ಅವನ ಪ್ರಕೋಪದಿಂದ ಆಜ್ಞಾನಿಯಾಗಿರುತ್ತಾರೆ. ನಮಾಝ್, ಉಪವಾಸದ ಮೇಲೆ ಗರ್ವಪಡುವವರಾಗಿರುತ್ತಾರೆ. ಪರಿಣಾಮವಾಗಿ ದಿನೇ ದಿನೇ ಅಲ್ಲಾಹನ ಪ್ರಕೋಪ ಹೆಚ್ಚುತ್ತಲೇ ಹೋಗುತ್ತದೆ. ಹಾಗಾಗಿ ಅವರು ಅವನ ಸಂತೃಪ್ತಿ ಪಡೆಯುವ ಬದಲಿಗೆ ಅಲ್ಲಾಹನಿಂದ ದೂರವಾಗುತ್ತಾರೆ. ಅವನಿಂದ ಧಿಕ್ಕರಿಸಲ್ಪಡುತ್ತಾರೆ. ಅದೇ ರೀತಿ ಯಾವ ವ್ಯಕ್ತಿ ಅಲ್ಲಾಹನ ಸಂಪ್ರೀತಿಯಲ್ಲಿ ತನ್ನನ್ನು ಕಳಕೊಂಡಿರುತ್ತಾನೆ. ಮತ್ತು ಅವನ ಮಡಿಲಲ್ಲಿ ಘೋಷಿಸಲ್ಪಡುತ್ತಾನೆ. ಅವನ ಅನುಗ್ರಹಕ್ಕೆ ಒಳಪಟ್ಟಿರುತ್ತಾನೆ. ಅವನು ಮಾತನಾಡುವುದು ದೇವನು ಮತನಾಡಿಸಿದಂತೆ, ಅವನ ಮಿತ್ರ ದೇವನ ಮಿತ್ರನಾಗುತ್ತಾನೆ, ಅವನ ಶತ್ರು ದೇವನ ಶತ್ರುವಾಗುತ್ತಾನೆ. ಅಂದ ಹಾಗೆ ದೇವನ ಶತ್ರು ಆದ ವ್ಯಕ್ತಿಯೊಬ್ಬನು ಹೇಗೆ ಸತ್ಯವಿಶ್ವಾಸಿಯಾಗಿರಲು ಸಾಧ್ಯ. ಹೀಗೆ ಅವನ ವಿಶ್ವಾಸ ಹರಣವಾಗುತ್ತದೆ. ಮತ್ತು ಅವನ ಪ್ರಕೋಪಕ್ಕೆ ಗುರಿಯಾಗುತ್ತಾನೆ. ಅಲ್ಲಾಹನು ಕಳುಹಿಸಿದ ಸುಧಾರಕರನ್ನು ಮತ್ತು ಅಲ್ಲಾಹನ ಸ್ನೇಹಿತರನ್ನು ವಿರೋಧಿಸುವವರು, ಪೀಡಿಸುವವರು ಎಂದೂ ಒಳ್ಳೆಯ ಫಲ ಪಡೆಯುವುದಿಲ್ಲ. ಯಾವ ವ್ಯಕ್ತಿ ಅವರನ್ನು ಪೀಡಿಸಿ ಮತ್ತು ದುಃಖ ನೀಡಿ ನಾನು ಆರಾಮವಾಗಿರಬಹುದು ಎಂದು ಭಾವಿಸುವವನು ತಪ್ಪು ಕಲ್ಪನೆಯಲ್ಲಿರುವನು ಮತ್ತು ತನ್ನ ಆತ್ಮಕ್ಕೆ ವಂಚಿಸುವವನಾಗುತ್ತಾನೆ. **(ಮಲ್ಫೂಝಾತ್ ಸಂಪುಟ 1, ಪುಟ 314 ಮುದ್ರಣ 2018 ಖಾದಿಯಾನ್)**

ಪ್ರವಾದಿಗಳು ಅಲ್ಲಾಹನ ಅನುಗ್ರಹದಿಂದ ಮುಗ್ದರಾಗಿರುತ್ತಾರೆ. ಮತ್ತೆ ಅವರು **"ಇಗ್‌ಫಿರ್‌ಲಿ"** ಹೇಳುವುದು ಯಾವ ಅರ್ಥಕ್ಕಾಗಿ?
ಸತ್ಯವಿಶ್ವಾಸಿಯ ವಿಭಿನ್ನ ದರ್ಜೆಯ ಪ್ರಕಾರ **"ಇಗ್‌ಫಿರ್‌ಲಿ"** ವಿಭಿನ್ನ ಅರ್ಥ ಒಳಗೊಂಡಿರುತ್ತದೆ.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ: ಇಬ್ರಾಹಿಂ ವಚನ 42 **ರಬ್ಬನಗ್‌ಫಿರ್‌ಲಿ ವಲಿವಾಲಿದಯ್ಯ ವಲಿಲ್ ಮುಮಿನೀನ ಯೌಮ ಯಖೂಮುಲ್ ಹಿಸಾಬ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

ಪ್ರವಾದಿಗಳು ಅಲ್ಲಾಹನ ಅನುಗ್ರಹದಿಂದ ಮುಗ್ಧರಾಗಿರುತ್ತಾರೆ. ಮತ್ತೆ ಅವರು "ಇಗ್‌ಫಿರ್‌ಲಿ' ಹೇಳುವುದು ಯಾವ ಅರ್ಥಕ್ಕಾಗಿ. ವಾಸ್ತವದಲ್ಲಿ ಜ್ಞಾನವಿಲ್ಲದ ಮನುಷ್ಯನ ದೃಷ್ಟಿ ಸಂಕುಚಿತವಾಗಿರುತ್ತದೆ. ಅವನ ದೃಷ್ಟಿ

*(ಪುಟ ಸಂಖ್ಯೆ-10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರೊಡನೆ ಹೀಗೆ ಹೇಳಿದರು: ಇನ್ನು ಮುಂದೆ ಖುರೈಶಿಯರಿಗೆ ನಮ್ಮೊಡನೆ ಹೀಗೆ ಮಾಡಲು ಸಾಧ್ಯವಾಗಲಾರದು. ಅಲ್ಲಾಹನು ನಮಗೆ ಮಕ್ಕಾದ ಮೇಲೆ ವಿಜಯ ನೀಡುವನು. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ನಾವು ಹಜರುಲ್ ಅಸ್ವದನ್ನು ಚುಂಬಿಸುವೆವು.

**ಹಮ್ರಾಉಲ್ ಅಸದ್ ಯುದ್ಧದ ಉಲ್ಲೇಖದೊಂದಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಪರಿಶುದ್ಧ ಜೀವನಚರಿತ್ರೆ ಹಾಗೂ ಸಹಾಬಿಯರ ತ್ಯಾಗಗಳ ವಿಶ್ವಾಸವರ್ಧಕ ಪ್ರಸ್ತಾಪ**

ಹಮ್‌ರಾಉಲ್ ಅಸದ್ ಯುದ್ಧದಲ್ಲಿ ಇಬ್ಬರು ಅನ್ಸಾರಿ ಸಹೋದರರಾದ ಹಝ್ರತ್ ಅಬ್ದುಲ್ಲಾಹ್ ಬಿನ್ ಸಹಲ್(ರ) ಮತ್ತು ಹಝ್ರತ್ ರಾಫಿಅ್ ಬಿನ್ ಸಹಲ್(ರ)ರ ಅನುಸರಣೆಯ ಮಾದರಿ

ಲೋಕದ ಸ್ಥಿತಿಗತಿಗಳಿಗಾಗಿ ದುಆಗಳನ್ನು ಮುಂದುವರೆಸಿರಿ.

ಆಸ್ರೇಲಿಯಾದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ದಿವಂಗತ ಫರಾಝ್ ಅಹ್ಮದ್ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗ಼ಾಯಿಬ್ ನಿರ್ವಹಣೆ

ಅವರು ಸಾವಿನ ಭಯದಿಂದ ಪಾಕಿಸ್ತಾನದಿಂದ ಬಂದಿಲ್ಲ ಎಂದು ತೋರಿಸುತ್ತದೆ ಬದಲಿಗೆ ಅಹ್ಮದೀಯರ ಮೇಲೆ ವಿಧಿಸಲಾದ ಧಾರ್ಮಿಕ ನಿರ್ಬಂಧಗಳಿಂದ ಬೇಸತ್ತು ದೇಶವನ್ನು ತೊರೆದರು

ಸರ್ವಶಕ್ತನಾದ ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಎಲ್ಲ ಸಂಬಂಧಿಕರಿಗೂ ಧೈರ್ಯ ನೀಡಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **26-04-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಹಮ್‌ರಾಉಲ್ ಅಸದ್ ಯುದ್ಧಕ್ಕೆ ಕಾರಣ ಮತ್ತು ಅದರ ಹಿನ್ನೆಲೆ ಕುರಿತು ಕಳೆದ ಖುತ್ಬದಲ್ಲಿ ಹೇಳಿದ್ದೆ. ಹೇಗಿದ್ದರೂ ಉಹುದ್ ಯುದ್ಧದ ನಂತರ ಶತ್ರುಗಳು ಮರಳಿ ಮದೀನದ ಮೇಲೆ ದಾಳಿ ನಡೆಸುವ ಯೋಜನೆಯ ಬಗ್ಗೆ ಗೊತ್ತಾದಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರನ್ನು ಕರೆದರು. ಅವರಿಬ್ಬರೂ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಮ್ಮ ಮಕ್ಕಳ ಮೇಲೆ ದಾಳಿ ನಡೆಸದೇ ಇರಲಿಕ್ಕಾಗಿ ನಾವು ಶತ್ರುಗಳ ಕಡೆಗೆ ಧಾವಿಸೋಣ. ಹಾಗೆ ಹಝ್ರತ್ ಪೈಗಂಬರ್(ಸ) ಬೆಳಿಗ್ಗಿನ ನಮಾಝಿನ ನಂತರ ಜನರನ್ನು ಕರೆಸಿದರು ಮತ್ತು ಹಝ್ರತ್ ಬಿಲಾಲ್(ರ)ರಿಂದ ಹೀಗೆ ಘೋಷಣೆ ಮಾಡಿಸಿದರು: ಶತ್ರುಗಳನ್ನು ಎದುರಿಸಲು ಹೊರಡಿರಿ; ನಿನ್ನೆ ಉಹುದಿನ ಯುದ್ಧದಲ್ಲಿ ಭಾಗಿಯಾಗಿದ್ದವರು ಮಾತ್ರ ನಮ್ಮ ಜೊತೆಗೆ ಹೊರಡಲಿ. ಅಂದರೆ ಉಹುದ್ ಯುದ್ಧದಲ್ಲಿ ಭಾಗವಹಿಸಿದವರು ಮಾತ್ರ ಜೊತೆಗೆ ಹೊರಡಲಿ.

ಹಝ್ರತ್ ಪೈಗಂಬರ್(ಸ) ತನ್ನ ಧ್ವಜವನ್ನು ತರಿಸಿ ಅದನ್ನು ಹಝ್ರತ್ ಅಲಿ(ರ)ರಿಗೆ ನೀಡಿದರು. ಹಝ್ರತ್ ಅಬೂಬಕರ್(ರ)ರಿಗೆ ನೀಡಲಾಗಿತ್ತು ಎಂದು ಕೂಡ ಒಂದೆಡೆ ವರದಿಯಾಗಿದೆ. ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಇಬ್ನು ಉಮ್ಮು ಮಕ್‌ತೂಮ್(ರ)ರನ್ನು ಮದೀನದಲ್ಲಿ ತನ್ನ ಪ್ರತಿನಿಧಿಯಾಗಿ ನೇಮಿಸಿದ್ದರು. (ಸಬ್ಲುಲ್ ಹುದಾ ವರ್‍ರಶ್ಯಾದ್, ಸಂಪುಟ-4, ಪುಟ-308, 309, ದಾರುಲ್ ಕುತುಬ್ ಇಲ್ಮೀಯಾ ಬೈರುತ್)

ಶತ್ರುಗಳನ್ನು ಹಿಂಬಾಲಿಸುವ ಹಝ್ರತ್ ಪೈಗಂಬರ್(ಸ)ರ ತೀರ್ಮಾನ ಅತ್ಯಂತ ವಿವೇಕಯುತವಾಗಿತ್ತು ಎಂದು ಚರಿತ್ರೆಗಾರರು ಬರೆಯುತ್ತಾರೆ. ಇನ್ನಷ್ಟು ಜನರನ್ನು ಸೇರಿಸದೆ ಯುದ್ಧಕ್ಕಾಗಿ ಹೋಗುವುದು ಕಪಟವಿಶ್ವಾಸಿಗಳ ಪ್ರಕಾರ ಅತ್ಯಂತ ಅಪಾಯಕರವಾಗಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರ ತೀರ್ಮಾನ ಅತ್ಯಂತ ಬುದ್ಧಿಯುಳ್ಳದ್ದಾಗಿತ್ತು ಎಂದು ನಂತರದ ಸ್ಥಿತಿಗತಿಗಳು ರುಜುವಾತು ಮಾಡಿತು. ಅದರಿಂದ ಮುಸ್ಲಿಮರಿಗೆ ಅನೇಕ ಪ್ರಯೋಜನಗಳು ಉಂಟಾದುವು. ಹಝ್ರತ್ ಪೈಗಂಬರ್(ಸ)ರವರು ಇಡೀ ರಾತ್ರಿ ಯುದ್ಧದಿಂದ ಉಂಟಾಗುವ ಪರಿಸ್ಥಿತಿಯ ಬಗ್ಗೆ ಯೋಚಿಸಿದರು. ಉಹದ್‌ನಿಂದ ಮಕ್ಕಾಗೆ ಹಿಂದಿರುಗುವ ಮುಶ್ರಿಕೀನರು ಯುದ್ಧಭೂಮಿಯಲ್ಲಿ ನಮ್ಮ ಕಡೆ ಭಾರವಾಗಿದ್ದರೂ (ನಾವು ಬಲಶಾಲಿಯಾಗಿದ್ದರೂ) ನಾವು ಯಾವುದೇ ಪ್ರಯೋಜನವನ್ನು ಪಡೆಯಲಿಲ್ಲ ಎಂದು ಭಾವಿಸಿದರೆ, ಅವರು ಖಂಡಿತವಾಗಿಯೂ ಪಶ್ಚಾತ್ತಾಪ ಪಡುತ್ತಾರೆ ಮತ್ತು ಅವರು ಪುನಃ ಮದೀನಾವನ್ನು ಆಕ್ರಮಿಸುತ್ತಾರೆ ಎಂದು ಅವರು(ಸ) ಯೋಚಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ)ರವರು ಅತ್ಯುತ್ತಮ ಯುದ್ಧ ತಂತ್ರವನ್ನು ಅಳವಡಿಸಿಕೊಳ್ಳುವ ಮೂಲಕ ಶತ್ರುಗಳನ್ನು ಹಿಂಬಾಲಿಸಲು ನಿರ್ಧರಿಸಿದರು. ಈ ತೀರ್ಮಾನವು ಯೋಧರ ಧೈರ್ಯವನ್ನು ಇನ್ನಷ್ಟು ಎತ್ತರಗಳಿಗೆ ತಲುಪಿಸಿತು ಮತ್ತು ಹಝ್ರತ್ ಪೈಗಂಬರ್(ಸ)ರ ದೃಢನಿಶ್ಚಯ ಮತ್ತು ದೃಢವಿಶ್ವಾಸದ ಶಕ್ತವಾದ ಪ್ರಭಾವ ಕಪಟವಿಶ್ವಾಸಿಗಳ ಹೃದಯಗಳಲ್ಲಿ ಉಂಟಾಯಿತು. ಮತ್ತೊಂದೆಡೆ ಇಸ್ಲಾಮಿನ ಸೇನೆ ಹಿಂಬಾಲಿಸುತ್ತಿದೆ ಎಂಬ ಸುದ್ದಿ ಶತ್ರುಗಳಿಗೆ ಮುಟ್ಟಿದಾಗ ಅವರಿಗೆ ಇದ್ದ ಅಲ್ಪಸ್ವಲ್ಪ ಧೈರ್ಯದ ದೀಪ ನಂದಿ ಹೋಗುವಂತಾಯಿತು. (ಫಝುವಾತ್ ವ ಸಾರಾಯಾ, ಅಲ್ಲಾಮಾ ಮುಹಮ್ಮದ್ ಅಝ್‌ಹರ್ ಫರೀದ್, ಪುಟ-215, ಫರೀದಿಯಾ ಪಬ್ಲಿಷರ್ಸ್ ಸಾಹಿವಾಲ್) ಇದು ಜೀವನಚರಿತ್ರೆಯ ಪುಸ್ತಕ ಟಿಪ್ಪಣಿಯಾಗಿದೆ.

ಈ ಸಂದರ್ಭದಲ್ಲಿ ಕಪಟವಿಶ್ವಾಸಿಗಳ ಸರದಾರ ಅಬ್ದುಲ್ಲಾಹ್ ಬಿನ್ ಉಬಯ್ ಕೂಡ ಜೊತೆಗೆ ಹೋಗಲು ಅನುಮತಿ ಕೇಳಿದ್ದನು. ಮತ್ತು ಅವನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಈ ಯುದ್ಧದಲ್ಲಿ ಭಾಗವಹಿಸಲು ವಿನಂತಿಸಲು ಪ್ರಾರಂಭಿಸಿದನು, ಆದಾಗ್ಯೂ, ಅವನು ಯುದ್ಧದಲ್ಲಿ ಹಿಂತಿರುಗಿದ್ದಲ್ಲದೆ ತನ್ನೊಂದಿಗೆ ಮುನ್ನೂರು ಸಂಗಡಿಗರನ್ನು ಮರಳಿ ತಂದಿದ್ದನು. ಅಂತಹ ಕೃತ್ಯದ ಬಗ್ಗೆ ಅವನು ಖಂಡಿತವಾಗಿಯೂ ನಾಚಿಕೆಪಟ್ಟಿರಬಹುದು ಮತ್ತು ಬಹುಶಃ ಈ ವಿಷಾದದ ಕಲೆಯನ್ನು ಅಳಿಸಲು ಅಥವಾ ದೇವರು ಬಲ್ಲವನು ಬೇರೆ ಪಿತೂರಿಯ ಅಡಿಯಲ್ಲಿ, ಕಪಟವಿಶ್ವಾಸಿಗಳ ಬಗ್ಗೆ ಏನೂ ತಿಳಿದಿಲ್ಲದ ಕಾರಣ, ಇವರು ಹಝ್ರತ್ ಪೈಗಂಬರ್(ಸ)ರ ಸೇವೆಯಲ್ಲಿ ಬಂದು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹೋಗಲು ಅನುಮತಿ ಕೇಳಿದಾಗ, ಹಝ್ರತ್ ಪೈಗಂಬರ್(ಸ)ರು ಅವರೊಂದಿಗೆ ಹೊಗಲು ಅನುಮತಿ ನೀಡಲಿಲ್ಲ. (ದಾಏರಾ ಮುಆರಿಫ್ ಸೀರತ್ ಮುಹಮ್ಮದ್(ಸ), ಸಂಪುಟ-7, ಪುಟ-121, ಬಝ್ಮ್ ಇಖ್ಬಾಲ; ಲಾಹೋರ್) ಅವರು(ಸ) ಇಲ್ಲ ಎಂದು ಹೇಳಿದರು.

ಪುನಃ ಯುದ್ಧಕ್ಕಾಗಿ ಹೊರಡಲು ಹಝ್ರತ್ ಪೈಗಂಬರ್(ಸ) ಮಾಡಿಸಿದ ಘೋಷಣೆಯ ನಂತರ ಗಾಯಗೊಂಡ ಸಹಾಬಿಯರ ಪ್ರೀತಿ ಮತ್ತು ನಿಷ್ಠೆಯ ಅವಸ್ಥೆ ಏನಾಗಿತ್ತು ಎಂದರೆ, ಅವರು ತಮ್ಮ ಗಾಯಗಳ ನೋವನ್ನು ಸಹಿಸುತ್ತಾ ತಮ್ಮ ಆಯುಧಗಳನ್ನು ಎತ್ತಿ ಪುನಃ ಬೇಗನೇ

ಯುದ್ಧಕ್ಕಾಗಿ ಹೊರಟರು. ಹಝ್ರತ್ ಉಸೈದ್ ಬಿನ್ ಹುಝೈರ್(ರ)ರಿಗೆ 9 ಗಾಯುಗಳಾಗಿದ್ದುವು. ಅವರು ಅವುಗಳಿಗೆ ಮದ್ದು ಹಾಕಲು ಹೋಗುತ್ತಿದ್ದರು. ಅಷ್ಟರಲ್ಲಿ ಯುದ್ಧದ ಘೋಷಣೆ ಅವರ ಕಿವಿಗಳಿಗೆ ಮುಟ್ಟಿತು. ಅವರು ಗಾಯಗಳಿಗೆ ಮದ್ದು ಕಟ್ಟಲು ಕೂಡ ಕಾಯದೆ ಯುದ್ಧಕ್ಕಾಗಿ ಹೊರಟರು. ಬನೂ ಸಲ್ಮಾ ಅವರಿಂದ ನಲ್ವತ್ತು ಗಾಯಾಳಿಗಳು ಹೊರಬಂದವು. ಇಂತಹ ಸ್ಥಿತಿಯಲ್ಲೂ ಅವರು ಆದೇಶವನ್ನು ಪಾಲಿಸುತ್ತಿರುವುದಾಗಿ ಹಝ್ರತ್ ಪೈಗಂಬರ್(ಸ) ಕಂಡಾಗ ಅವರಿಗಾಗಿ ಹೀಗೆ ಮಗ್ಫಿರತಿನ ದುಆ ಮಾಡಿದರು ಮತ್ತು ಹೇಳಿದರು:

**ಅಲ್ಲಾಹುಮ್ಮಗ್‌ಹವ್ ಬನೀ ಸಲಮ–** ಓ ಸರ್ವಶಕ್ತನಾದ ಅಲ್ಲಾಹನೇ!! ಬನೂ ಸಲಮಾ ಅವರ ಮೇಲೆ ಕರುಣೆ ತೋರಿಸು. ತುಫೈಲ್ ಬಿನ್ ನುಅ್‌ಮಾನ್‌ರಿಗೆ 13, ಖಿರಾಶ್ ಬಿನ್ ಅಸ್ಸಿಮ್ಮರಿಗೆ 10, ಕಅ್‌ಬ್ ಬಿನ್ ಮಾಲಿಕ್‌ರಿಗೆ ಹತ್ತಕ್ಕಿಂತ ಹೆಚ್ಚು ಮತ್ತು ಖಿತ್‌ಬ ಬಿನ್ ಆಮಿರ್‌ರಿಗೆ ಒಂಬತ್ತು ಗಾಯಗಳಾಗಿದ್ದುವು. ಹಾಗಿದ್ದೂ ಮುಸ್ಲಿಮರು ತಮ್ಮ ಆಯುಧಗಳ ಕಡೆಗೆ ಓಡಿ ಹೋದರು ಮತ್ತು ತಮ್ಮ ಗಾಯಗಳಿಗೆ ಔಷಧಿ ಕಟ್ಟಲಿಕ್ಕಾಗಿ ನಿಲ್ಲಲಿಲ್ಲ. ಲೋಕ ಇರುವ ತನಕ ಅವರಿಗಾಗಿ ಶ್ರದ್ಧಾಂಜಲಿ ಅರ್ಪಿಸುವಂತಾಗಲು ಹಝ್ರತ್ ಪೈಗಂಬರ್(ಸ)ರ ಸಹಾಬಿಯರ ಅತುಲ್ಯವಾದ ಈ ಆವೇಶದ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಿದ್ದಾನೆ. ಅಲ್ಲಾಹನು ಹೇಳುತ್ತಾನೆ: **ಅಲ್ಲಾಝೀನಸ್ತಜಾಬೂ ಲಿಲ್ಲಾಹಿ ವರ್‍ರಸೂಲಿ ಮಿಮ್ ಬಅ್‌ದಿ ಮಾ ಅಸಾಬಹುಮುಲ್ ಖರ್‌ಹು, ಲಿಲ್ಲಝೀನ ಅಹ್‌ಸನೂ ಮಿನ್‌ಹುಮ್ ವತ್ತಖೌ ಅಜ್ರುನ್ ಅಝೀಮ** (ಆಲಿ ಇಮ್ರಾನ್: 173) (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–308, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–7, ಪುಟ–122, ಬಝ್ಮ್ ಇಖ್ಬಾಲ್ ಲಾಹೋರ್)

ತಮಗೆ ಘಾಸಿಯಾದ ನಂತರವೂ ಅಲ್ಲಾಹನ ಮತ್ತು ಸಂದೇಶವಾಹಕನ ಕರೆಗೆ ಓಗೊಟ್ಟವರ ಪೈಕಿ ಸತ್ಕರ್ಮ ಮಾಡಿದವರಿಗೂ ದೇವಭಕ್ತರಿಗೂ ಮಹತ್ತಾದ ಪ್ರತಿಫಲವಿದೆ.

ಹಝ್ರತ್ ಆಯಿಶ(ರ) ಹೇಳುತ್ತಾರೆ: ಈ ವಚನದಲ್ಲಿ ಪ್ರಸ್ತಾಪಿಸಿದವರಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಝುಬೇರ್(ರ) ಸಹ ಒಳಪಡುತ್ತಾರೆ. (ಅಸ್ಸೀರತುಲ್ ಹಲಬೀಯಾ, ಸಂಪುಟ–2, ಪುಟ–350, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಅವರೊಂದಿಗೆ ಹೋಗಲು ಅನುಮತಿಯ ಬಗ್ಗೆ ಹೀಗೆ ಉಲ್ಲೇಖವಿದೆ, ಉಹುದ್ ಯುದ್ಧದಲ್ಲಿ ಭಾಗವಹಿಸಿದವರು ಮಾತ್ರ ಈ ಅಭಿಯಾನದಲ್ಲಿ ಹೋಗುತ್ತಾರೆ ಎಂದು ಹಝ್ರತ್ ಪೈಗಂಬರ್(ಸ) ಅವರು ಘೋಷಿಸಿದರು ಮತ್ತು ಅದನ್ನು ಕಟ್ಟುನಿಟ್ಟಾಗಿ ಅನುಸರಿಸಲಾಯಿತು. ಆದರೆ ಉಹುದ್ ಯುದ್ಧಕ್ಕೆ ಸೇರದ ಓರ್ವ ಅದೃಷ್ಟವಂತ ಮತ್ತು ಪ್ರಾಮಾಣಿಕ ಸಹಾಬಿ ಇದ್ದರು, ಆದರೆ ಈಗ ಅವರು ಅವರೊಂದಿಗೆ ಹೋಗಲು ಅನುಮತಿಸಿ ಪಡೆದಿದ್ರು ಮತ್ತು ಆ ಸಹಾಬಿ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಆಗಿದ್ದರು. ಇಬ್ನ್ ಇಸ್‌ಹಾಕ್(ರಹ್) ಮತ್ತು ಇಬ್ನ್ ಉಮರ್(ರ) ಹೇಳುತ್ತಾರೆ: ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಅವರು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದು ಹೇಳಿದರು: ಯಾ ರಸೂಲಲ್ಲಾಹ್(ಸ)!! ನಿಮ್ಮ ಘೋಷಣೆಕೂಗುವವನು ಯಾರು ಕಳೆದ ದಿನದ ಯುದ್ಧದಲ್ಲಿ, ಅಂದರೆ ಉಹದ್ ಯುದ್ಧದಲ್ಲಿ ನಮ್ಮೊಂದಿಗೆ ಭಾಗವಹಿಸಿದ್ದರು ಅವರಿಗೆ ಮಾತ್ರ ಇಂದೂ ಅಭಿಯಾನದಲ್ಲಿ ಭಾಗವಹಿಸಲು ಅನುಮತಿಸಲಾಗಿದೆ ಎಂದು ಘೋಷಿಸಿದ್ದಾರೆ ಮತ್ತು ನಾನು ಯುದ್ಧದಲ್ಲಿ ಭಾಗವಹಿಸಲು ಸಿದ್ಧನಿದ್ದೇನೆ ಆದರೆ ನನ್ನ ತಂದೆ ನನ್ನ ಏಳು ಸಹೋದರಿಯರನ್ನು ಬಿಟ್ಟಿದ್ದಾರೆ. ಒಂದು ವರದಿಯ ಪ್ರಕಾರ ಅವರಿಗೆ ಒಂಬತ್ತು ಸಹೋದರಿಯರಿದ್ದರು. ಆದಾಗ್ಯೂ, ನನ್ನ ತಂದೆ ನನ್ನನ್ನು ಉದ್ದೇಶಿದಿ ಹೇಳಿದರು: ಓ ನನ್ನ ಪುತ್ರನೇ! ಪುರುಷನಿಲ್ಲದೆ ಈ ಸ್ತ್ರೀಯರನ್ನು ಬಿಡುವುದು ನಿನಗೂ ನನಗೂ ಸರಿಯಲ್ಲ. ಇವರು ದುರ್ಬಲರಾಗಿದ್ದರಿಂದ ನನಗೆ ಭಯವಿದೆ. ಮತ್ತು ನಾನೂ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಜಿಹಾದ್‌ನಲ್ಲಿ ನನ್ನ ಮೇಲೆ ನಿನಗೆ ಆದ್ಯತೆ ನೀಡಲು ಸಾಧ್ಯವಿಲ್ಲ. ಮತ್ತು ನಾವು ಈ ಮಹಿಳೆಯರನ್ನು ಒಂಟಿಯಾಗಿ ಬಿಡಲು ಸಾಧ್ಯವಿಲ್ಲ, ನಾನು ಜಿಹಾದ್‌ಗೆ ಹೋಗಬೇಕೆಂದು ಬಯಸುತ್ತೇನೆ ಮತ್ತು ನಾನು ಹೋಗುತ್ತೇನೆ ಮತ್ತು ನೀವು ಹೋಗದಿದ್ದರೆ, ನೀವು ನಿಮ್ಮ ಸಹೋದರಿಯರೊಂದಿಗೆ ಹಿಂದೆ ಇರಿ ಮತ್ತು ನಾನು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಜಿಹಾದ್‌ನಲ್ಲಿ ಭಾಗವಹಿಸುತ್ತೇನೆ. ಅವರು ಹೇಳುತ್ತಾರೆ: ಆದ್ದರಿಂದ ನಾನು ನನ್ನ ತಂದೆಯ ಈ ಆದೇಶವನ್ನು ಅನುಸರಿಸಿ ಕಳೆದ ದಿನದ ಜಿಹಾದಿನಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅವರ ಪ್ರೀತಿ ಪ್ರೇಮದ ಆ ವಿವರಣೆಯನ್ನು ಆಲಿಸಿ ಹಝ್ರತ್ ಪೈಗಂಬರ್(ಸ) ಅವರಿಗೆ ಅವರೊಂದಿಗೆ ಹೋಗಲು ಅನುಮತಿ ನೀಡಿದರು. ಅದಕ್ಕೆ ಹಝ್ರತ್ ಜಾಬಿರ್(ರ) ಹೆಮ್ಮೆಯಿಂದ ಕಳೆದ ದಿನದ ಜಿಹಾದ್ನಲ್ಲಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಭಾಗವಹಿಸದ ಒಬ್ಬ ವ್ಯಕ್ತಿ ಹೋಗಲಿಲ್ಲ ಎಂದು ಹೇಳುತ್ತಿದ್ದರು. ಕಳೆದ ದಿನದ ಜಿಹಾದ್‌ನಲ್ಲಿ ಭಾಗವಹಿಸದ ಅವರೊಂದಿಗೆ ಹೋಗಲು ಅನೇಕ ಜನರು ಅನುಮತಿ ಕೇಳಿದರು, ಆದರೆ ಅವರು(ಸ) ನಿರಾಕರಿಸಿದರು. ಈ ಕಾರ್ಯಾಚರಣೆಗಾಗಿ ಹೊರಡುವಾಗ ಹಝ್ರತ್ ಪೈಗಂಬರ್(ಸ)ರ ಅವಸ್ಥೆ ಏನಾಗಿತ್ತು ಎಂದರೆ, ಅವರ ಅನುಗ್ರಹೀತ ಮುಖ ಗಾಯಗೊಂಡಿತ್ತು, ಅವರ ಅನುಗ್ರಹೀತ ಹಣೆಯಲ್ಲೂ ಗಾಯವಿತ್ತು, ಅವರ ಹಲ್ಲು ಮುರಿದಿತ್ತು, ಎರಡು ತುಟಿಗಳೂ ಒಳಗಿನಿಂದ ಗಾಯಗೊಂಡಿದ್ದುವು, ಬಲ ತೋಳು ಮತ್ತು ಎರಡೂ ಮೊಣಕಾಲುಗಳು ಗಾಯಗೊಂಡಿದ್ದುವು. ಹಝ್ರತ್ ಪೈಗಂಬರ್(ಸ) ಅವರು ಮೊದಲು ಮಸೀದಿಗೆ ಭೇಟಿ ನೀಡಿದರು. ಅಲ್ಲಿ ಅವರು ಎರಡು ರಕಅತ್ ನಮಾಝುನ್ನು ನಿರ್ವಹಿಸಿದರು. ಜನ ಜಮಾಯಿಸಿದ್ದರು. ನಂತರ ಹಝ್ರತ್ ಪೈಗಂಬರ್(ಸ) ತಮ್ಮ ಕುದುರೆಯನ್ನು ಸುಕ್ಬ್ ಅನ್ನು ಮಸೀದಿಯ ಬಾಗಿಲ ಬಳಿಗೆ ತರೆಸಿದರು. ಈ ಯುದ್ಧದಲ್ಲಿ, ಹಝ್ರತ್ ಪೈಗಂಬರ್(ಸ) ಅವರು ಮಾತ್ರ ಕುದುರೆಯನ್ನು ಹೊಂದಿದ್ದರು. ಹಝ್ರತ್ ಪೈಗಂಬರ್(ಸ) ಹೊರಟುಹೋದಾಗ, ಅವರು(ಸ) ರಕ್ಷಾಕವಚ ಮತ್ತು ಖೌದ್ ಅನ್ನು ಧರಿಸಿದ್ದರು ಮತ್ತು ಅವರ ಕಣ್ಣುಗಳು ಮಾತ್ರ ಕಾಣಿಸುತ್ತಿದ್ದವು. ಈ ಸಮಯದಲ್ಲಿ, ಹಝ್ರತ್ ಪೈಗಂಬರ್(ಸ) ಹಝ್ರತ್ ತಲ್ಹಾ ಬಿನ್ ಉಬೈದುಲ್ಲಾ(ರ) ಅವರನ್ನು ಭೇಟಿಯಾದರು. ಅವರು(ಸ) ಅವರಿಗೆ ಹೇಳಿದರು. ತಲ್ಹಾ! ನಿನ್ನ ಆಯುಧಗಳು ಎಲ್ಲಿವೆ? ಹಝ್ರತ್ ತಲ್ಹಾ(ರ) ಹೇಳಿದರಯ ಅದು ನನ್ನ ಸಮೀಪದಲ್ಲಿದೆ. ಹೀಗೆ ಹೇಳುತ್ತಾ ಅವರು ಬಹಳ ಆತುರದಿಂದ ಹೋಗಿ ತಮ್ಮ ಆಯುಧಗಳನ್ನು ತಂದರು, ಆ ಸಮಯದಲ್ಲಿ ತಲ್ಹಾ ಅವರ ಎದೆಯ ಮೇಲೆ ಮಾತ್ರ ಉಹದ್ ಯುದ್ಧದಿಂದ ಒಂಬತ್ತು ಗಾಯಗಳಾಗಿದ್ದವು. ಅವರ ಮೈಮೇಲೆ ಎಪ್ಪತ್ತಕ್ಕೂ ಹೆಚ್ಚು ಗಾಯಗಳಿದ್ದವು.

ಹಝ್ರತ್ ತಲ್‌ಹ(ರ) ಹೇಳುತ್ತಾರೆ: ನಾನು ನನ್ನ ಗಾಯಗಳಿಗಿಂತ ಹಝ್ರತ್ ಪೈಗಂಬರ್(ಸ)ರ ಗಾಯಗಳ ಬಗ್ಗೆ ಚಿಂತಿತನಾಗಿದ್ದೆ. ಹಝ್ರತ್ ಪೈಗಂಬರ್(ಸ) ನನ್ನ ಬಳಿಗೆ ಬಂದು ಹೇಳಿದರು: "ನೀವು ಶತ್ರುವನ್ನು ಎಲ್ಲಿ ನೋಡುತ್ತೀರಿ?" ಬೇರೆ ರೀತಿಯಲ್ಲಿ ಹೇಳುವುದಾದರೆ, ಅಬು ಸುಫ್ಯಾನ್ ಮತ್ತು ಅವನ ಸೈನ್ಯ ಎಲ್ಲಿದೆ ಎಂದು ನಿಮ್ಮ ಊಹೆ ಏನು? ಅದಕ್ಕೆ ನಾನು ಹೇಳಿದೆ: ನಾನು ಅವರನ್ನು ತಗ್ಗು ಪ್ರದೇಶದಲ್ಲಿ ನೋಡಿದೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ನನ್ನ ಅಭಿಪ್ರಾಯವೂ ಸಹ ಇದೇ ಆಗಿದೆ. ಮತ್ತೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರು, ಖುರೈಷಿಗಳಿಗೆ ಸಂಬಂಧಿಸಿದಂತೆ, ಅಲ್ಲಾಹನು ಮಕ್ಕಾವನ್ನು ನಮ್ಮ ಕೈಯಿಂದ ವಶಪಡಿಸಿಕೊಳ್ಳುವವರೆಗೆ ನಮ್ಮೊಂದಿಗೆ ಈ ರೀತಿ ವ್ಯವಹರಿಸಲು ಅವರಿಗೆ ಎಂದಿಗೂ ಅವಕಾಶವಿಲ್ಲ. ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರೊಡನೆ ಹೀಗೆ ಹೇಳಿದರು: ಇನ್ನು ಮುಂದೆ ಖುರೈಶಿಯರಿಗೆ ನಮ್ಮೊಡನೆ ಹೀಗೆ ಮಾಡಲು ಸಾಧ್ಯವಾಗಲಾರದು. ಅಲ್ಲಾಹನು ನಮಗೆ ಮಕ್ಕಾದ ಮೇಲೆ ವಿಜಯ ನೀಡುವನು. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ನಾವು ಹಜರುಲ್ ಅಸ್ವದನ್ನು ಚುಂಬಿಸುವೆವು.

ಅಬಿತ್ ಬಿನ್ ಸಾಲಬಾ ಖಾಝ್‌ರಜ್ ಹಮ್‌ರಾಉಲ್ ಅಸದ್ ತನಕ ಹಝ್ರತ್ ಪೈಗಂಬರ್(ಸ) ಅವರಿಗೆ ಮಾರ್ಗದರ್ಶನ ನೀಡುವವರಾಗಿದ್ದರು. ಒಂದು ವರದಿಯ ಪ್ರಕಾರ, ಸಾಬಿತ್ ಬಿನ್ ಝುಹಾಕ್ ಮಾರ್ಗದರ್ಶನ ನೀಡುವವರಾಗಿದ್ದರು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–308–309, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್) (ಅಸ್ಸೀರತುಲ್ ಹಲಬೀಯಾ, ಸಂಪುಟ–2, ಪುಟ–350–351, ದಾರುಲ್ ಕುತುಬ್ ಇಲ್ಮಿಯಾ ಬೈರುತ್) ಇವು ಎರಡು ಹದೀಸ್‌ಗಳಾಗಿವೆ.

ಈ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ಅವರು ಸುದ್ದಿಯನ್ನು ಪಡೆಯಲು ಇಬ್ಬರು ಸಹಚರರನ್ನು ಕಳುಹಿಸಿದರು. ಈ ವಿವರಣೆಯು ಕೆಳಕಂಡಂತಿದೆ: ಹಝ್ರತ್ ಪೈಗಂಬರ್(ಸ) ಸುಫ್ಯಾನ್ ಅವರ ಇಬ್ಬರು ಮಕ್ಕಳಾದ ಸಲೀತ್ ಮತ್ತು ನುಮಾನ್ ಅವರನ್ನು ಅಸ್ಲಮ್ ಗೋತ್ರದ ಒಂದು ಶಾಖೆಯಾದ ಬನುಸಹಮ್ ಗೋತ್ರದಿಂದ ಜನರ ಬಗ್ಗೆ ಮಾಹಿತಿ ಪಡೆಯಲು ಕಳುಹಿಸಿದರು, ಮತ್ತು ಅಸ್ಲಮ್ ಗೋತ್ರದ ಶಾಖೆಯಾದ ಬನು ಉವೈರ್ ಗೋತ್ರದ ಒಬ್ಬ ವ್ಯಕ್ತಿಯನ್ನು ಮೂರನೇ ವ್ಯಕ್ತಿಯನ್ನಾಗಿ ಕಳುಹಿಸಿದರು. ಅವರ ಹೆಸರನ್ನು ಉಲ್ಲೇಖಿಸಲಾಗಿಲ್ಲ. ಅವರಲ್ಲಿ

ಇಬ್ಬರು ಹಮ್ರಾಉಲ್–ಅಸದ್ ಸ್ಥಳದಲ್ಲಿ ಖುರೈಷ್‌ಗಳ ಬಳಿಗೆ ಹೋದರು. ಖುರೈಷರು ಮಾತನಾಡುತ್ತಿದ್ದರು. ಖುರೈಷಿಗಳು ಈ ಇಬ್ಬರನ್ನು ನೋಡಿ ಅವರನ್ನು ವಧಿಸಿದರು. ಹಝ್ರತ್ ಪೈಗಂಬರ್(ಸ) ಅವರು ತಮ್ಮ ಸಂಗಡಿಗರೊಂದಿಗೆ ಹೊರಟು ಹಮ್ರಾಉಲ್ ಅಸದ್ ಅನ್ನು ತಲುಪಿ ತಮ್ಮ ಸೈನ್ಯವನ್ನು ಬೀಡುಬಿಟ್ಟಾಗ, ಅವರ ಮೃತದೇಹಗಳು ಅಲ್ಲಿಯೇ ಇದ್ದವು ಮತ್ತು ಇಬ್ಬರು ಸಹಚರರನ್ನು ಒಂದೇ ಖಬರ್‌ನಲ್ಲಿ ದಫನ್ ಮಾಡಲಾಯಿತು.

ಈ ಯುದ್ಧದಲ್ಲಿ ಇಬ್ಬರು ಅನ್ಸಾರಿ ಸಹೋದರರಾದ ಹಝ್ರತ್ ಅಬ್ದುಲ್ಲಾಹ್ ಬಿನ್ ಸಹಲ್(ರ) ಮತ್ತು ಹಝ್ರತ್ ರಾಫಿಅ್ ಬಿನ್ ಸಹಲ್(ರ)ರ ಅನುಸರಣೆಯ ಮಾದರಿಯೂ ಕಂಡುಬರುತ್ತದೆ. ಅವರು ಗಾಯಗೊಂಡ ಸ್ಥಿತಿಯಲ್ಲಿ ಕಾಲ್ನಡಿಗೆಯಾಗಿ ಯಾತ್ರೆ ಮಾಡಿದರು. ಇದರ ವಿವರಣೆ ಹೀಗಿದೆ: ಅವರಿಬ್ಬರು ಉಹುದ್ ಯುದ್ಧದಿಂದ ಮರಳಿ ಬಂದಾಗ ತೀವ್ರವಾಗಿ ಗಾಯಗೊಂಡಿದ್ದರು. ಹಮ್‌ರಾಉಲ್ ಅಸದ್ ಯುದ್ಧದಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿ ಹಝ್ರತ್ ಪೈಗಂಬರ್(ಸ)ರ ಆಜ್ಞೆಯನ್ನು ಅವರಿಬ್ಬರು ಆಲಿಸಿದಾಗ ಅವರಲ್ಲಿ ಒಬ್ಬ ಮತ್ತೊಬ್ಬನೊಡನೆ ಹೀಗೆ ಹೇಳಿದರು: ಅಲ್ಲಾಹನಾಣೆ, ನಮಗೆ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗದೇ ಇದ್ದರೆ, ಅದು ಬಹಳ ದೊಡ್ಡ ದೌರ್ಭಾಗ್ಯವಾಗಿರುವುದು. ನಮಗೆ ಸವಾರಿ ಮಾಡಲು ಯಾವುದೇ ಸವಾರಿ ಮೃಗವಿಲ್ಲ. ಏನು ಮಾಡುವುದು ಎಂದು ಗೊತ್ತೂ ಆಗುತ್ತಿಲ್ಲ. ಹಝ್ರತ್ ಅಬ್ದುಲ್ಲಾಹ್ ಹೇಳಿದರು: ನನ್ನ ಜೊತೆಗೆ ಬಾ ನಾವು ಕಾಲ್ನಡಿಗೆಯಾಗಿ ಹೋಗೋಣ. ಹಝ್ರತ್ ರಾಫಿಅ್(ರ) ಹೇಳಿದರು: ಅಲ್ಲಾಹನಾಣೆ, ನನಗೆ ಗಾಯದ ಕಾರಣದಿಂದ ನಡೆಯುವ ಶಕ್ತಿಯಿಲ್ಲ. ಅವರ ಸಹೋದರ ಹೇಳಿದರು: ಬಾ, ನಾವು ಮೆಲ್ಲ ಮೆಲ್ಲನೆ ನಡೆದುಕೊಂಡು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗೋಣ. ಹೀಗೆ ಅವರಿಬ್ಬರೂ ಬೀಳುತ್ತಾ ಏಳುತ್ತಾ ನಡೆದರು. ಇಬ್ಬರೂ ಗಾಯಗೊಂಡಿದ್ದವರಾಗಿದ್ದರು. ಆದರೆ ಅವರಿಬ್ಬರಲ್ಲಿ ಸ್ವಲ್ಪ ಉತ್ತಮನು ಹೆಚ್ಚು ಗಾಯಗೊಂಡಿದ್ದ ಸಹೋದರನನ್ನು ತನ್ನ ಹೆಗಲ ಮೇಲೆ ಕುಳ್ಳಿರಿಸುತ್ತಿದ್ದನು. ಈ ಅವಸ್ಥೆಯಲ್ಲೂ ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗುತ್ತಿದ್ದರು. ದೌರ್ಬಲ್ಯದ ಕಾರಣದಿಂದ ಚಲಿಸಲು ಸಾಧ್ಯವಾಗದ ಸ್ಥಿತಿ ಉಂಟಾಗುತ್ತಿತ್ತು. ಕೊನೆಗೆ ಇಶಾದ ಸಮಯದಲ್ಲಿ ಅವರಿಬ್ಬರೂ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಸಹಾಬಿಯರು ಅಷ್ಟರಲ್ಲಿ ಡೇರೆಗಳನ್ನು ಹಾಕಿ ಬೆಂಕಿ ಹೊತ್ತಿಸಿಕೊಂಡಿದ್ದರು. ಅವರಿಬ್ಬರನ್ನೂ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ತರಲಾಯಿತು. ಹಝ್ರತ್ ಪೈಗಂಬರ್(ಸ) ಕೇಳಿದರು: ನೀವು ತಡವಾಗಿ ಬರಲು ಕಾರಣವೇನು? ಅವರಿಬ್ಬರೂ ಅದರ ಕಾರಣವನ್ನು ವಿವರಿಸಿದರು. ಹಝ್ರತ್ ಪೈಗಂಬರ್(ಸ) ಅವರಿಬ್ಬರಿಗಾಗಿ ದುಆ ಮಾಡುತ್ತಾ ಹೀಗೆ ಹೇಳಿದರು: ನಿಮಗಿಬ್ಬರಿಗೂ ದೀರ್ಘಾಯುಸ್ಸು ಲಭಿಸಿದರೆ, ನಿಮಗೆ ಸವಾರಿಗಾಗಿ ಕುದುರೆಗಳು, ಹೇಸರಗತ್ತೆಗಳು ಮತ್ತು ಒಂಟೆಗಳು ಲಭಿಸುವುದಾಗಿ ನೀವು ನೋಡುವಿರಿ. ಆದರೆ ಈಗ ನೀವಿಬ್ಬರೂ ಕಾಲ್ನಡಿಗೆಯಾಗಿ ಬೀಳುತ್ತಾ ಏಳುತ್ತಾ ಮಾಡಿದ ಈ ಯಾತ್ರೆಗಿಂತ ಅವುಗಳು ಉತ್ತಮವಾಗಿರದು. ಎಂದರೆ ನಿಮ್ಮ ಈ ಯಾತ್ರೆಯ ಪ್ರತಿಫಲ ಆ ಕಾಲದ ಅತ್ಯುತ್ತಮ ಅನುಗ್ರಹಗಳಿಗಿಂತ ಉತ್ತಮವಾಗಿದೆ. ಈ ಘಟನೆಯು ಘಝಾಲಾ ಅವರ ಮಕ್ಕಳಾದ ಹಝ್ರತ್ ಅನಸ್(ರ) ಮತ್ತು ಮುನಿಸ್(ರ) ಅವರಿಗೆ ಸಂಭವಿಸಿದೆ ಎಂದು ಹೇಳಲಾಗುತ್ತದೆ. ಹೀಗಾಗಿ ಇಬ್ಬರಿಗೂ ಈ ಘಟನೆ ನಡೆದಿರುವ ಸಾಧ್ಯತೆ ಇದೆ. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–310, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1993)

ತದನಂತರ ಮುಸ್ಲಿಮರ ಯಾತ್ರೆಯ ಆಹಾರ ಹಾಗೂ ಹಝ್ರತ್ ಸಅದ್ ಬಿನ್ ಉಬಾದ(ರ) ಅವರ ಔದಾರ್ಯವನ್ನು ಉಲ್ಲೇಖಿಸಲಾಗಿದೆ. ಇದರ ವಿವರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ: ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ಹೇಳುತ್ತಾರೆ: ಈ ಯುದ್ಧದ ಯಾತ್ರೆಯಲ್ಲಿ ಸಾಮಾನ್ಯವಾಗಿ ನಮ್ಮ ಆಹಾರ ಖರ್ಜೂರಗಳಾಗಿದ್ದುವು. ಹಝ್ರತ್ ಸಅದ್ ಬಿನ್ ಉಬಾದ(ರ) ಮೂವತ್ತು ಒಂಟೆಗಳು ಮತ್ತು ಖರ್ಜೂರಗಳನ್ನು ತಂದಿದ್ದರು. ಹಮ್‌ರಾಉಲ್ ಅಸದ್ ಎಂಬ ಪ್ರದೇಶಕ್ಕೆ ತಲುಪುವ ತನಕ ಅವುಗಳು ನಮಗೆ ಧಾರಾಳವಾಗಿದ್ದುವು. ವರದಿಗಾರರು ಹೇಳುತ್ತಾರೆ: ಕೆಲವೊಮ್ಮೆ ಎರಡೆರಡು ಮೂರುಮೂರು ಒಂಟೆಗಳನ್ನು ವಧಿಸಲಾಗುತಿತ್ತು. ಕೆಲವೊಮ್ಮೆ ಖರ್ಜೂರದೊಂದಿಗೆ ಒಂಟೆಯಮಾಂಸ ಮತ್ತು ಒಂಟೆಗಳನ್ನು ತಿನ್ನುತ್ತಿದ್ದರು.

ಇದರಲ್ಲಿ ಬುದ್ಧಿವಂತಿಕೆ ಏನಾಗಿತ್ತು? ನಿಮ್ಮ ಯುದ್ಧದ ತಂತ್ರವೇನು? ನೀವು ಶತ್ರುವನ್ನು ಹೇಗೆ ಬೆದರಿಸಲು ಬಯಸಿದ್ದೀರಿ? ಈ ಬಗ್ಗೆ ವಿವರವಾಗಿ ಬರೆಯಲಾಗಿದೆ, ಸೇನೆಯ ಆಧಿಕ್ಯ ಪ್ರಕಟಗೊಳ್ಳುವಂತಾಗಲು ಮತ್ತು ಶತ್ರುಗಳನ್ನು ಬೆರಗಿಸಲು ರಾತ್ರಿ ಸಮಯದಲ್ಲಿ ಬಹಳ ಹೆಚ್ಚಾಗಿ ಬೆಂಕಿಯ ಒಲೆಗಳನ್ನು ಉರಿಸಲಾಗುತ್ತಿತ್ತು. ಆದ್ದರಿಂದ ಸೈನ್ಯದ ಸಮೃದ್ಧಿ ಕಾಣಿಸಿಕೊಳ್ಳುತ್ತದೆ ಮತ್ತು ಶತ್ರುಗಳು ಭಯಪಡುತ್ತಾರೆ. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಅವರು ರಾತ್ರಿಯಲ್ಲಿ ಬಿಡಾರ ಹೂಡಿದರೆ, ಅವರು ಸಹಾಬಿಗಳಿಗೆ ಹರಡಲು ಮತ್ತು ಪ್ರತ್ಯೇಕ ಬೆಂಕಿಗಳನ್ನು ಬೆಳಗಿಸಲು ಹೇಳುತ್ತಿದ್ದರು. ಹೀಗೆ ಒಬ್ಬೊಬ್ಬರು ಒಂದೊಂದು ಬೆಂಕಿಯನ್ನು ಹೊತ್ತಿಸಿದರು. ದೂರದಿಂದ ಕಾಣುವವರೆಗೆ ಐದು ನೂರು ಸ್ಥಳಗಳಲ್ಲಿ ಬೆಂಕಿ ಹೊತ್ತಿಸಲಾಯಿತು ಎಂದು ಭಾಸವಾಗುತಿತ್ತು. ಮುಸ್ಲಿಂ ಸೈನ್ಯ ಮತ್ತು ಈ ಬೆಂಕಿಯ ಉಲ್ಲೇಖವು ದೂರದವರೆಗೆ ಹರಡಿತು. ಇದರಿಂದಾಗಿ ಅಲ್ಲಾಹನು ಶತ್ರುವನ್ನು ನಿಗ್ರಹಿಸಿದನು. ಈ ಸಂಬಂಧವಾಗಿ ಮಅ್‌ಬದ್ ಬಿನ್ ಅಬೂ ಮಅ್‌ಬದ್ ಖುಝಾಈಯ ಪ್ರಸ್ತಾಪ ಕೂಡ ಬರುತ್ತದೆ. ಆತನು ಹಝ್ರತ್ ಪೈಗಂಬರ್(ಸ)ರನ್ನು ಭೇಟಿ ಮಾಡಿದ್ದನು ಮತ್ತು ಇಸ್ಲಾಮಿನ ಸೇನೆಯ ಬಗ್ಗೆ ಖುರೈಶಿಯರನ್ನು ಎಚ್ಚರಿಸಿದನು. ಅದರ ವಿವರಣೆಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ ಮಅ್‌ಬದ್ ಬಿನ್ ಅಬೂ ಮಅ್‌ಬದ್ ಖುಝಾಈ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಭೇಟಿಯಾದನು. ಆತನು ಆ ಕಾಲದಲ್ಲಿ ಮುಶ್ರಿಕನಾಗಿದ್ದನು. ಕೆಲವು ಜೀವನಚರಿತ್ರೆಕಾರರು ಈ ಸಂದರ್ಭದಲ್ಲಿ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವುದನ್ನು ಉಲ್ಲೇಖಿಸಿದ್ದಾರೆ, ಆದರೆ ಹೆಚ್ಚಿನವರು ಅವರು ಆ ಸಮಯದಲ್ಲಿ ಇಸ್ಲಾಂ ಅನ್ನು ಸ್ವೀಕರಿಸಲಿಲ್ಲ ಎಂದು ಹೇಳಿದ್ದಾರೆ, ಆದರೆ ನಂತರ ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು.

ಬನೂ ಖುಝಾಅದ ವಿಶ್ವಾಸಿಗಳು ಮತ್ತು ಬಹುದೇವತಾವಾದಿಗಳು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಪ್ರಾಮಾಣಿಕತೆಯನ್ನು ವ್ಯಕ್ತಪಡಿಸುತ್ತಿದ್ದರು. ಅವರ ಇತರ ಅನೇಕ ಗೋತ್ರದ ಜನರು ಮುಸಿಮ್ ಆಗಿದ್ದರು. ಅವರಲ್ಲಿ ಪ್ರಾಮಾಣಿಕತೆಯ ಅಭಿವ್ಯಕ್ತಿಯೂ ಇತ್ತು. ಈ ಜನರು ಅವರ ಬಳಿ ಏನನ್ನೂ ಮುಚ್ಚಿಡುವುದಿಲ್ಲ ಎಂಬ ಭರವಸೆಯನ್ನು ಹೊಂದಿದ್ದರು. ಮಅ್‌ಬದ್ ಹೇಳಿದರು: ಓ ಮುಹಮ್ಮದ್(ಸ)! ನೀವು ಮತ್ತು ನಿಮ್ಮ ಸಹಚರರು ಅನುಭವಿಸಿದ ಸಂಕಟಗಳಿಗೆ ನಾವು ತೀವ್ರವಾಗಿ ನೋವನ್ನು ಅನುಭವಿಸಿದ್ದೇವೆ. ಅಲ್ಲಾಹನು ನಿಮ್ಮ ಸ್ಥಾನಮಾನವನ್ನು ಉನ್ನತೀಕರಿಸುತ್ತಾನೆ ಮತ್ತು ಎಲ್ಲಾ ದುಃಖಗಳಿಂದ ನಿಮ್ಮನ್ನು ರಕ್ಷಿಸಲಿ ಎಂಬುದು ನಮ್ಮ ಆಶಯವಾಗಿದೆ. ಈ ಸಹಾನುಭೂತಿಯ ಅಭಿವ್ಯಕ್ತಿಯ ಮೇಲೆ, ಹಝ್ರತ್ ಪೈಗಂಬರ್(ಸ) ಅವರು ಮಅ್‌ಬದ್‌ನನ್ನು ಹೇಳಿದರು: ನೀವು ಅಬುಸುಫ್ಯಾನ್ ಅವರನ್ನು ನಿರುತ್ಸಾಹಗೊಳಿಸುವಂತೆ ಮಾಡಿರಿ. ನೀವು ಹೋಗುತ್ತಿರುವಿರಿ, ನಿಮ್ಮ ಮುಂದಿನ ಪ್ರಯಾಣದಲ್ಲಿ ನೀವು ಅವನನ್ನು ಭೇಟಿಯಾದರೆ, ಅವನನ್ನು ಸ್ವಲ್ಪ ಹೆದರಿಸಿ. ಮತ್ತೆ ಹೇಗೆ ಅವರು ತಮ್ಮದೇ ಆದ ತಂತ್ರವನ್ನು ಮಾಡಬೇಕಾಗಿತ್ತು. ನಂತರ ಮಅ್‌ಬದ್ ಮಕ್ಕಾಗೆ ಹೊರಟಿದನು ಮತ್ತು ಹಝ್ರತ್ ಪೈಗಂಬರ್(ಸ) ಅವರು ಹಮ್ರಾಉಲ್ ಅಸದ್‌ನಲ್ಲಿಯೇ ತಂಗಿದ್ದರು. ಅವರು ರೌಹಾ ಎಂಬ ಸ್ಥಳದಲ್ಲಿ ಅವರು ಅಬುಸುಫ್ಯಾನ್ ಮತ್ತು ಅವನ ಸಂಗಡಿಗರನ್ನು ಭೇಟಿಯಾದರು. ರೌಹಾ ಮದೀನಾದಿಂದ ಸುಮಾರು ನಲವತ್ತು ಮೈಲಿ ದೂರದಲ್ಲಿರುವ ಒಂದು ಸ್ಥಳವಾಗಿದೆ. ಆ ಸಮಯದಲ್ಲಿ, ಖುರೈಷ್ ಸೈನ್ಯವು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಮರಳಲು ಮತ್ತು ಅವರ ಮೇಲೆ ಹಲ್ಲೆನಡೆಸಲು ಒಪ್ಪಿಕೊಂಡಿದ್ದರು ಮತ್ತು ಅವರು ಹೇಳಿದರು, ನಾವು ಅವರ ಅತ್ಯುತ್ತಮ ಮತ್ತು ಮುಖ್ಯಸ್ಥರು ಮತ್ತು ನಾಯಕರನ್ನು ಕೊಂದಿದ್ದೇವೆ, ಆದರೂ ಅಂತಹ ವಿಷಯವೇನಿಲ್ಲ. ಹಝ್ರತ್ ಹಮ್‌ಝಾ(ರ) ಅಮರೊಂದಿಗೆ ಕೆಲವು ಹೆಸರುಗಳಾಗಿರಬಹುದು, ಇಲ್ಲದಿದ್ದರೆ ಪ್ರವಾದಿ ಮುಹಮ್ಮದ್(ಸ)ರೊಂದಿಗೆ ಹಝ್ರತ್ ಅಬುಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ) ಜೊತೆಗೆ ಡಜನ್ಗಟ್ಟಲೆ ಪ್ರಸಿದ್ಧ ನಾಯಕರು ಅಲ್ಲಾಹನ ದಯೆಯಿಂದ ಅವರು ಉಹದ್ ಯುದ್ಧದಲ್ಲಿ ಸುರಕ್ಷಿತವಾಗಿದ್ದರು. ನಂತರ ಅವರು ಹೇಳಿದರು, ಹಾಗಾದರೆ ನಾವು ಅವರನ್ನು ವಜಾಗೊಳಿಸುವ ಮೊದಲು ಹಿಂತಿರುಗಿದೆವು. ಈಗ ನಾವು ಉಳಿದವರ ಮೇಲೆ ತಿರುಗಿ ಕೊಂದು ಬಿಡುತ್ತೇವೆ. ಅಬುಸುಫ್ಯಾನ್ ಮಅ್‌ಬದ್‌ನನ್ನು ನೋಡಿದಾಗ, ಇವರು ಮಅ್‌ಬದ್ ಆಗಿದ್ದಾರೆ ಅವರ ಬಳಿ ಏನಾದರೂ ಸುದ್ದಿ ಇರುತ್ತದೆ. ಅದಕ್ಕೆ ಅವರು ಹೇಳಿದನು ಮಅ್‌ಬದ್!! ಹಿಂದಿನ ಪರಿಸ್ಥಿತಿಗಳು ಹೇಗಿವೆ? ಅಬುಸುಫ್ಯಾನ್‌ನನ್ನು ಹೆದರಿಸುವ ಸಲುವಾಗಿ, ನಾನು ಮುಹಮ್ಮದ್(ಸ.ಅ) ಮತ್ತು ಅವರ ಸಂಗಡಿಗರನ್ನು ಎಂತಹ ಸ್ಥಿತಿಯಲ್ಲಿ ಬಿಟ್ಟಿದ್ದೇನೆ ಎಂದರೆ, ಅವರು ಎಂತಹ ಸೈನ್ಯದೊಂದಿಗೆ ನಿಮ್ಮನ್ನು ಹಿಂಬಾಲಿಸಲು ಬಂದಿದ್ದಾರೆ ಎಂದರೆ ನಾನು ಅಂತಹ ದೊಡ್ಡ ಸೈನ್ಯವನ್ನು ಇಂದಿನವರೆಗೂ ನೋಡಿಲ್ಲ. ನಿನ್ನೆ ಬಿಟ್ಟು ಹೋಗಿದ್ದ ಔಸ್ ಮತ್ತು ಖಝ್‌ರಜ್ ಜನರೂ ಅವರ ಜೊತೆ ಸೇರಿಕೊಂಡಿದ್ದಾರೆ. ಅವನು ತನ್ನ ಕಡೆಯಿಂದನೂ ಒಂದು ಕಥೆಯನ್ನು ಸೃಷ್ಟಿಸಿದನು. ಮತ್ತು ಅವರು ನಿಮ್ಮನ್ನು ಹುಡುಕುವವರೆಗೆ ಮತ್ತು ನಿಮ್ಮ ಸೇಡು ತೀರಿಸಿಕೊಳ್ಳುವವರೆಗೂ ಅವರು ಹಿಂತಿರುಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾರೆ. ಅವರು ತಮ್ಮ

ಸಮುದಾಯದ ಕಾರಣದಿಂದ ಕೋಪಗೊಂಡಿದ್ದಾರೆ. ಮೊದಲು ಸೇರದ ತಮ್ಮ ಕ್ರಮಕ್ಕೆ ಅವರು ತೀವ್ರವಾಗಿ ವಿಷಾದಿಸಿದ್ದಾರೆ. ಅವರಿಗೆ ನಿನ್ನ ಮೇಲೆ ಎಷ್ಟು ಕೋಪವಿದೆಯೆಂದರೆ, ನಾನು ಅಂತಹ ತೀವ್ರವಾದ ಕೋಪವನ್ನು ಎಂದಿಗೂ ನೋಡಲಿಲ್ಲ. ಅಬುಸುಫ್ಯಾನ್ ಹೇಳಿದನು, ನಿನಗೆ ಸಾವು ಸಂಭವಿಸಲಿ, ನೀನು ಏನು ಹೇಳುತ್ತಿರುವೆ! "ಕುದುರೆಗಳ ಹಣೆಬರಹವನ್ನು ನೋಡುವವರೆಗೆ ನೀನು ಇಲ್ಲಿಂದ ಹೊರಡುವುದಿಲ್ಲವೆಂದು ತೋರುತ್ತದೆ" ಎಂದನು. ಅಬುಸುಫ್ಯಾನ್ ಹೇಳತೊಡಗಿದನು, ಅಲ್ಲಾಹನ ಆಣೆ! ನಾವು ಅವರ ಮೇಲೆ ಪ್ರಾಬಲ್ಯ ಸಾಧಿಸಲು ಮತ್ತು ಅವುಗಳನ್ನು ಬೇರುಸಹಿತ ಕಿತ್ತುಹಾಕಲು ಒಪ್ಪಿಕೊಂಡಿದ್ದೇವೆ. ಇನ್ನು ಮುಂದೆ ನೀನು ಹೀಗೆ ಮಾಡದಂತೆ ನಾನು ನಿನ್ನನ್ನು ಮತ್ತೊಮ್ಮೆ ತಡೆಯುತ್ತೇನೆ ಎಂದು ಮಅ್‌ಬದ್ ಹೇಳಿದನು. ನಾನು ನೋಡಿದ ಭಯಾನಕ ದೃಶ್ಯವು ನನ್ನನ್ನು ಕವಿತೆಗಳನ್ನು ಬರೆಯಲು ಒತ್ತಾಯಿಸಿತು. ಅಬುಸುಫ್ಯಾನ್ ಹೇಳಿದನು, ಅಸು ಯಾವ ಕವಿತೆಗಳು? ಅದಕ್ಕೆ ಮಅ್‌ಬದ್ ಈ ಶ್ಲೋಕಗಳನ್ನು ಪಠಿಸಿದನು.

**ಕಾದತ್ ತುಹದ್ದ ಮಿನಲ್ ಅಸ್ವಾತಿ ರಾಹಿಲತಿ ಇಝ್**
**ಸಾಲತುಲ್ ಅರ್ಝು ಬಿಲ್ ಜುರ್ದಿಲ್ ಅಬಾಬೀಲಿ**
**ತರ್ದಿ ಬಿಉಸ್ದಿನ್ ಕಿರಾಮಿನ್ ಲಾ ತನಾಬೀಲತಿನ್**
**ಇಂದಲ್ಲಿಖಾಇ ವಲಾ ಮೀಲಿನ್ ಮಆಝೀಲಿ**
**ಫಝುಲ್ತು ಅದ್ವನ್ ಅಝುನ್ನುಲ್ ಅರ್ಝ ಮಾಇಲತನ್**
**ಲಮ್ಮಾ ಸಮೌ ಬಿರಈಸಿ ಗೈರಿ ಮಖ್‌ಝೂಲಿ**
**ಫಖುಲ್ತು ವೈಲಬ್‌ನಿ ಹರ್ಬಿನ್ ಮಿನ್ ಲಿಖಾಯಿಕುಮ್**
**ಇಝಾ ತಗ್ಗತ್‌ಮತತಿಲ್‌ಬತ್‌ಹಾ ಉ ಬಿಲ್‌ಜೀಲಿ**
**ಇನ್ನೀ ನಝೀರುನ್ ಲಿಅಹ್‌ಲಿಲ್‌ಬಸ್ಲಿ ಝಾಹಿಯತನ್**
**ಲಿಕುಲ್ಲಿ ಝೀ ಇಬತಿನ್ ಮಿನ್‌ಹುಮ್ ವ ಮಅ್‌ಖೂಲಿ**
**ಮಿನ್ ಜೈಷಿ ಅಹ್ಮದ ಲಾ ವಖಶಿನ್ ತನಾಬೀಲತಿನ್**
**ವ ಲೈಸ ಯೂಸಫು ಮಾ ಅಂಝುರ್ತು ಬಿಲ್‌ಖೀಲಿ**

ಅಂದರೆ: ಉದಾತ್ತ ಕುದುರೆಗಳ ಹಿಂಡುಗಳು ನೆಲದ ಮೇಲೆ ನಡೆಯಲು ಪ್ರಾರಂಭಿಸಿದಾಗ, ಅವುಗಳ ಗೊರಸುಗಳ ಶಬ್ದವು ನನ್ನ ಒಂಟೆಗಳು ತತ್ತರಿಸಿ ಬೀಳುವಂತೆ ಮಾಡಿತು. ಈಗ ಒಂದೇ ಒಂದು ಕುದುರೆ ಇತ್ತು, ಆದರೆ ಅವನು ತನ್ನ ಕವಿತೆಗಳಲ್ಲಿ ಅಂತಹ ಉತ್ಪ್ರೇಕ್ಷಿತ ಚಿತ್ರವನ್ನೂ ಬಿಡಿಸಿದನು ಅದು ಆ ಜನರನ್ನು ಭಯಭೀತಗೊಳಿಸಿತು. ಆಗ ಆ ಕುದುರೆಗಳು ಉತ್ತಮ ಸಿಂಹಗಳಂತಹ ವೀರ ಯೋಧರನ್ನು ಹೊತ್ತೊಯ್ಯುತ್ತಿದ್ದವು ಎಂದು ಹೇಳಲಾಗುತ್ತದೆ, ಅವರು ಎತ್ತರದಲ್ಲಿ ಕಡಿಮೆಯಿಲ್ಲದ, ಯುದ್ಧದಲ್ಲಿ ಕೌಶಲ್ಯವಿಲ್ಲದ, ಸವಾರಿಯಲ್ಲಿ ಬೃಹದಾಕಾರದಲ್ಲ. ಅದೇನೆಂದರೆ, ಅವರು ಯುದ್ಧದಲ್ಲಿ ನಿಪುಣರು ಮತ್ತು ಬಾಣ ಮತ್ತು ಖಡ್ಗಗಳಿಂದ ಶಸ್ತ್ರಸಜ್ಜಿತರಾಗಿದ್ದಾರೆ ಮತ್ತು ರಂಗದಲ್ಲಿ ಅನನ್ಯರಾಗಿದ್ದಾರೆ. ಆಗ ನಾನು ಸುದ್ದಿಯನ್ನು ನೀಡಲು ಆತುರಪಟ್ಟೆ, ಮತ್ತು ಒಬ್ಬನೇ ಅಲ್ಲ, ಆದರೆ ಲಾವೋ ತನ್ನ ಸೈನ್ಯದೊಂದಿಗೆ ಮುನ್ನಡೆಯುತ್ತಿದ್ದ ಕುದುರೆಗಳ ಮುಂದೆ ಭೂಮಿಯು ನಮಸ್ಕರಿಸುತ್ತಿರುವಂತೆ ನನಗೆ ತೋರಿತು. ಓ ಸೈನ್ಯದ ಜನರೇ! ಇಬ್ನ್ ಹರ್ಬ್ ಎಂದರೆ ನಿಮ್ಮೊಂದಿಗೆ ಯುದ್ಧದಲ್ಲಿ ಅಬು ಸುಫ್ಯಾನ್ ಸಾವು ಖಚಿತವಾಗಿದೆ. ರಣರಂಗವು ಸೈನ್ಯದ ಧ್ವನಿಯೊಂದಿಗೆ ಪ್ರತಿಧ್ವನಿಸುವಾಗ. ಅಹ್ಮದ್(ಸ)ರ ಈ ಮಹಾನ್ ಸೈನ್ಯದ ವಿರುದ್ಧ ಖುರೈಷ್ ಜನರಲ್ಲಿರುವ ಪ್ರತಿಯೊಬ್ಬ ಬುದ್ಧಿವಂತ ಮತ್ತು ಸಮಂಜಸ ವ್ಯಕ್ತಿಯನ್ನು ನಾನು ಎಚ್ಚರಿಸುತ್ತೇನೆ, ಅವರ ಸೈನ್ಯವು ಕೀಳು ಮತ್ತು ಕೀಳು ಜನರನ್ನು ಒಳಗೊಂಡಿರುವುದಿಲ್ಲ. ನಾನು ನಿಮಗೆ ತಿಳಿಸಲಿರುವ ಈ ಸೇನೆಯ ಭಯೋತ್ಪಾದನೆಯನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.

ಸಫ್ವಾನ್ ಬಿನ್ ಉಮಯ್ಯ ಅವರ ಭಾಷಣದ ಜೊತೆಗೆ ಮಅ್‌ಬದ್‌ನ ಕವಿತೆಗಳ ಈ ನರ–ವಿದ್ರಾವಕ ಮಾತುಗಳಿಂದ ಅಬುಸುಫ್‌ಯಾನ್ ಮತ್ತು ಅವನ ಸಂಗಡಿಗರ ಧೈರ್ಯಗುಂದಿತು. ಅವರನ್ನು ಗಾಬರಿ ಮತ್ತು ಭಯ ಆವರಿಸಿತು. ಆದಷ್ಟು ಬೇಗ ತನ್ನ ಸೇನೆಯೊಂದಿಗೆ ಮಕ್ಕಾಗೆ ತಲುಪುವುದೇ ಕ್ಷೇಮವೆಂದು ಅಬುಸುಫ್‌ಯಾನ್ ಮನಗಂಡನು.

'ಅಬು ಸುಫ್ಯಾನ್‌ನನ್ನು ನಿರುತ್ಸಾಹಗೊಳಿಸು' ಎಂದು ಹಝ್‌ರತ್ ಪೈಗಂಬರ್(ಸ) ಅವರು ಮಅ್‌ಬದ್‌ಗೆ ಹೇಳಿದರು ಎಂದು ಈ ಮಾತಿನ ಬಗ್ಗೆ ರಿಸೆರ್ಚ್ ಸೆಲ್ (ಸಂಶೋಧನಾ ಕೋಶದ) ಟಿಪ್ಪಣಿಯೂ ಇದೆ. ಕೆಲವು ಜೀವನಚರಿತ್ರೆಗಳು ಇದನ್ನು ವಿವರಿಸಿವೆ ಮತ್ತು ಕೆಲವು ವಿವರಿಸಿಲ್ಲ. ಹಝ್‌ರತ್ ಪೈಗಂಬರ್(ಸ) ರವರು ಇಂತಹ ಮಾತುಗಳನ್ನು ಮಅ್‌ಬದ್‌ನನ್ನು ಯುದ್ಧತಂತ್ರವಾಗಿ ಹೇಳಿರುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತದೆ ಮತ್ತು ಹಝ್‌ರತ್ ಪೈಗಂಬರ್(ಸ) ರವರು ಈ ರೀತಿ ಹೇಳಲಿಲ್ಲ ಎಂಬುದೂ ಸಾಧ್ಯತೆಯಿದೆ. ಆದರೆ ಅವನು ಮುಸ್ಲಿಮರ ಬಗ್ಗೆ ಸಹಾನುಭೂತಿ ಹೊಂದಿದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಅದನ್ನು ಅವನ ಹೃದಯದಲ್ಲಿ ಇರಿಸಿರಬಹುದು ಮತ್ತು ಅವನು ಸ್ವತಃ ಅಬುಸುಫ್ಯಾನ್‌ಗೆ ಈ ಎಲ್ಲಾ ವಿಷಯಗಳನ್ನು ಹೇಳಿದನು.

ಆದಾಗ್ಯೂ, ಇದು ಅವರ ಟಿಪ್ಪಣಿಯಾಗಿದೆ, ಆದರೆ ಮಅ್‌ಬದ್ ಏನು ಹೇಳಿದರೂ ಇದು ಅವನ ಸ್ವಂತ ಆಲೋಚನೆಯಾಗಿದೆ. ಹಝ್‌ರತ್ ಪೈಗಂಬರ್(ಸ) ಅವರು ಯಾವುದೇ ರೀತಿಯ ತಪ್ಪು ನಿರೂಪಣೆಯನ್ನು ಸ್ಪಷ್ಟವಾಗಿ ಹೇಳಿಲ್ಲ, ಆದರೆ ಅವರು ಬೆದರಿಕೆ ಹಾಕುವ ರೀತಿ ಮತ್ತು ಅವರು ಚಿತ್ರಿಸಿದ ನಕ್ಷೆಯು ಅವಿಶ್ವಾಸಿಗಳನ್ನು ಭಯಭೀತಗೊಳಿಸಿತು. ಅದೇ ಸಮಯದಲ್ಲಿ ಬಹುದೇವತಾವಾದಿಗಳ ಸೈನ್ಯವು ಮಕ್ಕಾಗೆ ಮರಳಲು ತಯಾರಿ ನಡೆಸುತ್ತಿದ್ದಾಗ, ಅಬ್ದ್ ಅಲ್–ಖೈಸ್‌ನ ಒಂದು ಸಂಘವು ಅಬುಸುಫ್ಯಾನ್ ಮೂಲಕ ಹಾದುಹೋಯಿತು, ಅವರು ಆ ಸ್ಥಳದಲ್ಲಿ ನೆಲೆಸಿದ್ದರು. ನೀವು ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಅವರು ಕೇಳಿದರು. ಅದಕ್ಕೆ ಅವರು ನಾವು ಮದೀನಾಗೆ ಹೋಗುತ್ತಿದ್ದೇವೆ ಎಂದು ಹೇಳಿದರು. ಅದಕ್ಕೆ ಅಬುಸುಫ್ಯಾನ್ ತನ್ನ ಪ್ರಚಾರಕ್ಕಾಗಿ ಮಾನಸಿಕ ದಾಳಿಯನ್ನು ಮಾಡಲು ಬಯಸಿದ್ದನು, ಆದರೆ ವಿಫಲನಾದನು ಮತ್ತು ಅವರು ಹೇಳಿದರು, ನೀವು ನನ್ನ ಪರವಾಗಿ ಮುಹಮ್ಮದ್(ಸ) ಗೆ ಸಂದೇಶವನ್ನು ಕಳುಹಿಸುತ್ತೀರಾ? **'ಉಕ್ಕಾಝ್'** ಹಬ್ಬದಲ್ಲಿ ಒಣದ್ರಾಕ್ಷಿ ತುಂಬಿದ ಒಂಟೆಯನ್ನು ನಿನಗೆ ಕೊಡುತ್ತೇನೆ. ಅವರು ಹೌದು ಎಂದು ಒಪ್ಪಿಕೊಂಡರು. ಅಬುಸುಫ್ಯಾನ್ ಹೇಳಿದನು, ನೀವು ಮುಹಮ್ಮದ್(ಸ) ಅವರನ್ನು ಭೇಟಿಯಾದಾಗ ಅವರಿಗೆ ಹೇಳಿ, ನಾವು ಅವರ ಮತ್ತು ಅವರ ಸಹಚರರ ಕಡೆಗೆ ಅವನ ಉಳಿದ ಜನರನ್ನು ಬೇರುಸಹಿತ ಕಿತ್ತುಹಾಕಲು ನಾವು ಒಪ್ಪಿಕೊಂಡಿದ್ದೇವೆ ಎಂದು ಹೇಳಿ. ನಾವು ಹಝ್‌ರತ್ ಪೈಗಂಬರ್(ಸ)ರ ಜನರನ್ನು ಹಿಂಬಾಲಿಸುತ್ತಿದ್ದೇವೆ ಮತ್ತು ಇದನ್ನು ಹೇಳಿದ ನಂತರ ಅಬುಸುಫ್ಯಾನ್ ಮಕ್ಕಾದ ಕಡೆಗೆ ಹೋದನು. ಈ ಸಂಘವು ಅವರನ್ನು ಹಮ್ರಾಉಲ್ ಅಸದ್ ಸ್ಥಳದಲ್ಲಿ ಭೇಟಿಯಾದರು. ಅಬುಸುಫ್ಯಾನ್ ಮತ್ತು ಅವನ ಸಂಗಡಿಗರು ಅವನ ಬಗ್ಗೆ ಹೇಳಿದ್ದನ್ನು ಅಬ್ದುಲ್ ಖೈಸ್ ಹಝ್‌ರತ್ ಪೈಗಂಬರ್(ಸ)ರಿಗೆ ತಿಳಿಸಿದರು. ಇದನ್ನು ಕೇಳಿ ಹಝ್‌ರತ್ ಪೈಗಂಬರ್(ಸ)ರು ಹೇಳಿದನು. ಹಸ್ಬುನಲ್ಲಾಹ ವ ನಯಿಮಲ್ ವಕೀಲ್. ಅಂದರೆ, ಸರ್ವಶಕ್ತನಾದ ಅಲ್ಲಾಹನು ನಮಗೆ ಸಾಕು ಮತ್ತು ಅವನು ಉತ್ತಮ ಕಾರ್ಯನಿರ್ವಹಿಸುವವನಾಗಿದ್ದಾನೆ.

(ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟಗಳು 310–311, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಲ್–ರಾಹಿಕ್ ಅಲ್–ಮಖ್ತೂಮ್, ಪುಟ–253, ದಾರ್ ಅಲ್–ವಫಾ ಮಿಸ್ರ್, 2010) (ಶರ್ಹ್ ಜರ್ಕಾನಿ, ಸಂಪುಟ–2, ಪುಟ–264, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಆದಾಗ್ಯೂ, ಹಮ್ರಾಉಲ್ ಅಸದ್‌ನಲ್ಲಿ ಸ್ವಲ್ಪ ಸಮಯ ಉಳಿದುಕೊಂಡಿತು ಮತ್ತು ನಂತರ ಇಸ್ಲಾಮಿಕ್ ಸೈನ್ಯವೂ ಹಿಂತಿರುಗಿತು ಏಕೆಂದರೆ ಅವಿಶ್ವಾಸಿಗಳು ಅಲ್ಲಿಂದ ಹೊರಟರು. ಅಬುಸುಫ್ಯಾನ್ ಮಅ್‌ಬದ್ ಖುಝಾಈನ ಮಾತುಗಳನ್ನು ಕೇಳಿದ ನಂತರ ಮದೀನಾದ ಕಡೆಗೆ ಹೋಗುವ ಉದ್ದೇಶವನ್ನು ತ್ಯಜಿಸಿ ಮಕ್ಕಾಗೆ ಹೊರಟಿದನು ಎಂದು ಅದರ ವಿವರಣೆಯಲ್ಲಿ ಬರೆಯಲಾಗಿದೆ. ಅಬೂಸುಫ್‌ಯಾನ್ ಹೊರಟು ಹೋದ ವಾರ್ತೆ ಲಭಿಸಿದ ನಂತರ ಹಝ್ರ್‌ರತ್ ಪೈಗಂಬರ್(ಸ) ಮೂರು ದಿನಗಳ ಕಾಲ ಸೋಮವಾರ, ಮಂಗಳವಾರ ಮತ್ತು ಬುಧವಾರ ಅಲ್ಲಿ ತಂಗಿದರು. ಅನಂತರ ಮದೀನಕ್ಕೆ ಮರಳಿ ಹೋದರು. ಮತ್ತು ಬಲಾಝೂರಿಯ ಪ್ರಕಾರ ಹಝ್ರ್‌ರತ್ ಪೈಗಂಬರ್(ಸ) ಐದು ದಿನಗಳಷ್ಟು ಕಾಲ ಮದೀನದಿಂದ ಹೊರಗೆ ಇದ್ದರು ಎಂದು ಹೇಳಿದ್ದಾರೆ. (ಅಮ್ತಾಉಲ್ ಅಸ್ಮಾ, ಭಾಗ–1, ಪುಟ–180–181, ದಾರುಲು ಕುತುಬ್ ಇಲ್‌ಮಿಯಾ ಬೈರುತ್ 1999) (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–312, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್‌ರತ್ ಪೈಗಂಬರ್(ಸ) ಶುಕ್ರವಾರ ಮದೀನಾಗೆ ಹಿಂದಿರುಗಿದರು ಮತ್ತು ಐದು ದಿನಗಳ ಕಾಲ ಮದೀನಾದಿಂದ ಹೊರಗಿದ್ದರು ಎಂಬ ವರದಿಯು ಇದೆ. (ಕಿತಾಬುಲ್ ಮಘಾಝಿ, ಸಂಪುಟ–1, ಪುಟ–334, ಆಲಂ ಅಲ್–ಕುತುಬ್, ಬೈರುತ್, 1984)

ಹಝ್ರ್‌ರತ್ ಅಬೂಉಬೈದ(ರ) ಹೇಳುತ್ತಾರೆ: ಹಝ್ರ್‌ರತ್ ಪೈಗಂಬರ್(ಸ) ಮದೀನದ ಕಡೆಗೆ ಮರಳಿ ಬರುವುದಕ್ಕೆ ಮುಂಚೆ ಮುಆವಿಯ ಬಿನ್ ಮುಗೈರನನ್ನು ಬಂಧಿಸಿ ಇರಿಸಿದ್ದರು. ಆತನು ರಹಸ್ಯವಾಗಿ ಮದೀನದಲ್ಲಿ ವಾಸಿಸುತ್ತಿದ್ದನು ಮತ್ತು ಮದೀನದ ಸ್ಥಿತಿಗತಿಗಳ ಬಗ್ಗೆ ವಿರೋಧಿಗಳಿಗೆ ಮಾಹಿತಿ ನೀಡುತ್ತಿದ್ದನು. ಆತನನ್ನು ಬಂಧಿಸಲಾದಾಗ ಆತನು ಹಝ್ರ್‌ರತ್ ಉಸ್ಮಾನ್(ರ)ರಿಂದ ಅಭಯ ಯಾಚಿಸಿಕೊಂಡನು. ಹಝ್ರ್‌ರತ್ ಉಸ್ಮಾನ್(ರ)ರ ವಿನಂತಿ ಪ್ರಕಾರ ಆತನಿಗೆ ಹಝ್ರ್‌ರತ್ ಪೈಗಂಬರ್(ಸ) ಅಭಯ ನೀಡುತ್ತಾ ಹೀಗೆ ಹೇಳಿದರು: ಈತ ಮೂರು ದಿನಗಳೊಳಗೆ ಇಲ್ಲಿಂದ ಹೊರಟು ಹೋಗಬೇಕು. ಮೂರು ದಿನಗಳ ನಂತರ ಈತ ಇಲ್ಲಿ ಕಂಡು ಬರುವುದಾದರೆ ಈತನನ್ನು ವಧಿಸಲಾಗುವುದು. ಆದರೆ ಆತ ಮೂರು

ದಿನಗಳ ನಂತರವೂ ರಹಸ್ಯವಾಗಿ ಅಲ್ಲೇ ಇದ್ದನು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಝೈದ್ ಬಿನ್ ಹಾರಿಸ(ರ) ಮತ್ತು ಹಝ್ರತ್ ಅಮ್ಮಾರ್ ಬಿನ್ ಯಾಸಿರ್(ರ)ರೊಡನೆ ಹೀಗೆ ಹೇಳಿದರು: ಆತ ಇಂತಿಂತಹ ಜಾಗದಲ್ಲಿ ಅಡಗಿರುವುದಾಗಿ ನೀವು ಕಾಣುವಿರಿ. ಹಾಗೆ ಅವರಿಬ್ಬರೂ ಆತನನ್ನು ಅಲ್ಲಿರುವುದಾಗಿ ಕಂಡಾಗ ಆತನನ್ನು ವಧಿಸಿದರು.
(ಅಸ್ಸೀರತುನ್ನಬವೀಯ ಲಿಇಬನೆ ಹಿಶ್ಶಾಮ್, ಪುಟ–548, ದಾರುಲ್ ಕುತುಬ್ ಇಲ್‌ಮಿಯಾ 2001)

ಹಮ್‌ರಾಉಲ್ ಅಸದಿನ ಪ್ರದೇಶದಲ್ಲಿ ಹಝ್ರತ್ ಪೈಗಂಬರ್(ಸ) ಮುಶ್ರಿಕರ ಕವಿಯಾದ ಅಬೂ ಉಜ್ಜಾರನ್ನು ಸಹ ಬಂಧಿಸಿದ್ದರು. ಇದಕ್ಕೆ ಮುಂಚೆ ಆತ ಬದ್ರ್ ಯುದ್ಧದ ಸಮಯದಲ್ಲಿ ಮುಸ್ಲಿಮರ ಕೈಯಲ್ಲಿ ಬಂಧಿಸಲ್ಪಟ್ಟಿದ್ದನು. ಆಗ ಆತನು ತನ್ನ ಬಡತನ ಮತ್ತು ತನ್ನ ಮಕ್ಕಳ ಹೆಸರಲ್ಲಿ ಹಝ್ರತ್ ಪೈಗಂಬರ್(ಸ)ರೊಡನೆ ಕೃಪೆದೋರಲು ವಿನಂತಿಸಿದ್ದನು. ಹೀಗೆ ಹಝ್ರತ್ ಪೈಗಂಬರ್(ಸ) ಆತನಿಂದ ಯಾವುದೇ ಪರಿಹಾರಧನವನ್ನು ಪಡೆಯದೇ ಉಪಕಾರವೆಂಬ ರೀತಿಯಲ್ಲಿ ಆತನನ್ನು ಬಿಡುಗಡೆಗೊಳಿಸಿದ್ದರು. ಇನ್ನು ಮುಂದೆ ಹಝ್ರತ್ ಪೈಗಂಬರ್(ಸ)ರ ವಿರುದ್ಧ ಯುದ್ಧ ಮಾಡಲು ಬರಬಾರದು, ಹಝ್ರತ್ ಪೈಗಂಬರ್(ಸ)ರ ವಿರುದ್ಧ ಸೇನೆಯನ್ನು ತಯಾರು ಮಾಡಬಾರದು ಮತ್ತು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಯಾರನ್ನೂ ಉತ್ತೇಜಿಸಬಾರದು ಎಂಬ ಪ್ರತಿಜ್ಞೆಯನ್ನು ಆತನಿಂದ ಪಡೆಯಲಾಗಿತ್ತು. ಆದರೆ ಆತನು ತನ್ನ ಪ್ರತಿಜ್ಞೆಯನ್ನು ಉಲ್ಲಂಘಿಸಿದನು ಮತ್ತು ಉಹುದ್ ಯುದ್ಧದಲ್ಲಿ ಖುರೈಶಿಯರ ಜೊತೆಗೆ ಮರಳಿ ಬಂದನು ಹಾಗೂ ತನ್ನ ಕವಿತೆಗಳ ಮೂಲಕ ಖುರೈಶಿಯರನ್ನು ಕೆರಳಿಸುತ್ತಿದ್ದನು. ಆತ ಈ ಬಾರಿ ಬಚಾವಾಗಿ ಹೋಗದಿರಲಿ ಎಂದು ಹಝ್ರತ್ ಪೈಗಂಬರ್(ಸ) ದುಆ ಮಾಡಿದರು. ಹಾಗೆ ಆತ ಪುನಃ ಬಂಧಿಸಲ್ಪಟ್ಟನು. ಆತನು ಪುನಃ ಬಿಡುಗಡೆಗೊಳ್ಳಲಿಕ್ಕಾಗಿ ಕೆಲವು ಕಾರಣಗಳನ್ನು ಹೇಳಿಕೊಂಡನು. ಆದರೆ ಆತನನ್ನು ವಧಿಸಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದರು ಮತ್ತು "ಸತ್ಯವಿಶ್ವಾಸಿ ಒಂದು ಹುತ್ತದಿಂದ ಎರಡು ಬಾರಿ ಕಚ್ಚಿಸಿಕೊಳ್ಳಲಾರನು" ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. (ಅಸ್ಸೀರತುಲ್ ಹಲಬೀಯಾ, ಸಂಪುಟ–2, ಪುಟ–352, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸೀರತುಲ್ ಹಲಬೀಯಾ ಉರ್ದು, ಸಂಪುಟ–2, ಪುಟ–236–237, ದಾರುಲ್ ಇಶಾಅತ್ ಕರಾಚಿ 2009)

ಉಳಿದ ಭಾಗ ಮುಂದಿನ ಬಾರಿ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್. ಲೋಕದ ಸ್ಥಿತಿಗತಿಗಳಿಗಾಗಿ ದುಆಗಳನ್ನು ಮುಂದುವರೆಸಿರಿ. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯನ್ನು ಎಲ್ಲ ವಿಧ ತೊಂದರೆಗಳಿಂದ ಸುರಕ್ಷಿತಗೊಳಿಸಲಿ. ಈಗ ನಾನು ಒಂದು ಜನಾಝವನ್ನು ಸಹ ನಿರ್ವಹಿಸುವೆನು. ಅದು ಆಸ್ಟ್ರೇಲಿಯಾದಲ್ಲಿ ಕಳೆದ ದಿನಗಳಲ್ಲಿ ಶಹೀದ್ ಆದ ಮುಕರ್‌ರಮ್ ಫರಾಝ್ ಅಹ್ಮದ್ ತಾಹಿರ್ ಸಾಹಿಬ್ ಅವರದ್ದಾಗಿದೆ. ಆಸ್ಟ್ರೇಲಿಯಾದ ಸಿಡ್ನಿಯ ಪ್ರಸಿದ್ಧ ಪ್ರದೇಶವಾದ ಬೋಂಡಿಯಲ್ಲಿನ ಶಾಪಿಂಗ್ ಸೆಂಟರ್‌ನಲ್ಲಿ ಆಸ್ಟ್ರೇಲಿಯಾದ ವ್ಯಕ್ತಿಯೊಬ್ಬನು ಅವರನ್ನು ಚಾಕುವಿನಿಂದ ಇರಿದು ಶಹೀದ್ ಮಾಡಿದನು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ದಿವಂಗತರು ಶಾಪಿಂಗ್ ಸೆಂಟರ್ ನಲ್ಲಿ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ದಿವಂಗತರು ಮೂವತ್ತು ವರ್ಷದವರಾಗಿದ್ದು ಅವಿವಾಹಿತರಾಗಿದ್ದರು. ಈ ದಾಳಿಯಲ್ಲಿ 12 ಮಂದಿ ಗಾಯಗೊಂಡಿದ್ದು, ಆರು ಮಂದಿ ಸಾವನ್ನಪ್ಪಿದ್ದಾರೆ. ಮೃತಪಟ್ಟ ಆರು ಜನರಲ್ಲಿ ಐವರು ಮಹಿಳೆಯರು.

ದಿವಂಗತ ಫರಾಝ್ ಅಹ್ಮದ್ ತಾಹಿರ್ ಸಾಹಿಬ್ ರಬ್ವಾಹ್ ಗೆ ಸೇರಿದವರು. 2018 ರಲ್ಲಿ ಪಾಕಿಸ್ತಾನದಿಂದ ಶ್ರೀಲಂಕಾಗೆ ಸ್ಥಳಾಂತರಗೊಂಡರು. ನಾಲ್ಕು ವರ್ಷಗಳ ಕಾಲ ಅಲ್ಲಿಯೇ ಇದ್ದರು. ನಂತರ (ಯುಎನ್‌ಹೆಚ್‌ಸಿಆರ್) ಮೂಲಕ ಕಳೆದ ವರ್ಷ ಆಸ್ಟ್ರೇಲಿಯಾಕ್ಕೆ ಬಂದರು. ದಿವಂಗತರು ಕಳೆದ ತಿಂಗಳು ಸೆಕ್ಯುರಿಟಿ ಲೈಸೆನ್ಸ್ ಪಡೆದಿದ್ದು, ಸಾವಿನ ದಿನದಂದು ಶಾಪಿಂಗ್ ಸೆಂಟರ್‌ನಲ್ಲಿ ಮೊದಲ ದಿನದ ಕೆಲಸ ಎಂದು ಹೇಳಲಾಗುತ್ತಿದೆ. ರಾತ್ರಿ ಡ್ಯೂಟಿ ಕೊಡುತ್ತಿದ್ದರು ಆದರೆ ಹಗಲು ಮೊದಲ ಡ್ಯೂಟಿಯಾಗಿತ್ತು. ವಿವರಗಳ ಪ್ರಕಾರ, ದಿವಂಗತ ಮಕರ್‌ರಮ್ ಫರಾಝ್ ಅಹ್ಮದ್ ಸಾಹಿಬ್ ತಾಹಿರ್, ಜನರು ಭಯಭೀತರಾಗಿ ಓಡುತ್ತಿರುವುದನ್ನು ಕಂಡಾಗ, ಅವರು ದಾಳಿಕೋರನನ್ನು ತಡೆಯಲು ಮುಂದಾದರು, ಅದರ ಮೇಲೆ ದಾಳಿಕೋರನು ದಿವಂಗತರಿಗೆ ಇರಿದನು ಆದ ಕಾರಣ ಅವರಿಗೆ ಚಲಿಸಲು ಸಾಧ್ಯವಾಗಲಿಲ್ಲ. ಈ ದಾಳಿಯಲ್ಲಿ ಮೃತರಾದ ಮೊದಲ ವ್ಯಕ್ತಿ ಅವರಾಗಿದ್ದರು. ಮೃತರ ಕುಟುಂಬದಲ್ಲಿ, ಅಹ್ಮದಿಯತ್ ಶಹಪುರ್ ಜಿಲ್ಲೆಯ ನಿವಾಸಿಯಾಗಿದ್ದ ಅವರ ಮುತ್ತಜ್ಜ ಮಕ್ರಾಮ್ ಮಿಯಾಂ ಅಹ್ಮದ್ ಸಾಹಿಬ್ ಅವರ ಮಧ್ಯಸ್ಥಿಕೆಯ ಮೂಲಕ ಆಗಮಿಸಿತು. ದಿವಂಗತರ ಅಜ್ಜ ಮಕ್ರಂ ಸೂಫಿ ಅಹ್ಮದ್ ಯಾರ್ ಸಾಹಿಬ್ ಅವರಿಗೆ ಸುದೀರ್ಘ ಕಾಲದವರೆಗೆ ಜಮಾಅತ್ತಿನ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಅವರ ತಂದೆ ಬಶೀರ್ ಅಹ್ಮದ್ ಸಾಹಿಬ್ 2005 ರಲ್ಲಿ ನಿಧನರಾದರು ಮತ್ತು ಅವರ ತಾಯಿ ರಜಿಯಾ ಬೇಗಂ 2014 ರಲ್ಲಿ ನಿಧನರಾದರು. ಮೃತರು ಮೂವರು ಸಹೋದರರು, ಇಬ್ಬರು ಸಹೋದರಿಯರು ಮತ್ತು ಅಜ್ಜ ಸೂಫಿ ಅಹ್ಮದ್ ಯಾರ್ ಸಾಹಿಬ್ ಅವರನ್ನು ಅಗಲಿದ್ದಾರೆ. ಅವರ ಬಗ್ಗೆ ಹೆಚ್ಚಿನ ವಿವರಗಳಲ್ಲಿ, ದಿವಂಗತ ಫರಾಝ್ ಅಹ್ಮದ್ ತಾಹಿರ್ ಸಾಹಿಬ್ ಅವರ ಶೌರ್ಯ ಮತ್ತು ತ್ಯಾಗಕ್ಕೆ ಆಸ್ಟ್ರೇಲಿಯಾದ ಪ್ರಧಾನಿ ಮತ್ತು ನ್ಯೂ ಸೌತ್ ವೇಲ್ಸ್ ಪ್ರಧಾನಿ ಗೌರವ ಸಲ್ಲಿಸಿದ್ದಾರೆ. ಅದೇ ರೀತಿ, ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಪಾಕಿಸ್ತಾನದ ಹೈಕಮಿಷನರ್ ಕೂಡ ದಿವಂಗತ ಫರಾಝ್ ಅಹ್ಮದ್ ತಾಹಿರ್ ಅವರ ಶೌರ್ಯಕ್ಕೆ ಗೌರವ ಸಲ್ಲಿಸುವ ಸಂದರ್ಭದಲ್ಲಿ ವಿಷಾದ ವ್ಯಕ್ತಪಡಿಸಿದರು ಮತ್ತು ಎಲ್ಲಾ ರೀತಿಯ ಸಹಕಾರದ ಭರವಸೆ ನೀಡಿದರು. ದಿವಂಗತರ ಬಗ್ಗೆ ಮಾಧ್ಯಮಗಳಲ್ಲಿ ನೂರ ಇಪ್ಪತ್ತಕ್ಕೂ ಹೆಚ್ಚು ಸುದ್ದಿಗಳು ಪ್ರಕಟವಾದವು ಮತ್ತು ಈ ಘಟನೆ ಮತ್ತು ಹೆಚ್ಚಿನವುಗಳು ಪ್ರಕಟಣೆಯಾಗುತ್ತಿವೆ. ಇಂದು ಅಲ್ಲಿಯೇ ಅವರ ಜನಾಝ ನಡೆದಿದ್ದು, ಅಲ್ಲಿನ ಪ್ರಧಾನಿ, ಪ್ರಧಾನಿ ಮೊದಲಾದವರು ಅಲ್ಲಿಗೆ ಆಗಮಿಸಿ ಮತ್ತೊಮ್ಮೆ ಶ್ರದ್ಧಾಂಜಲಿ ಸಲ್ಲಿಸಿದ್ದರು. ಫರಾಝ್ ತಾಹಿರ್ ಸಾಇಬ್ ಅವರ ಶೌರ್ಯ ಮತ್ತು ತ್ಯಾಗವನ್ನು ಸಾಮಾಜಿಕ ಮಾಧ್ಯಮದಲ್ಲಿ ಬಹಳ ಸುಂದರವಾದ ಪದಗಳಲ್ಲಿ ವಿವರಿಸಲಾಗುತ್ತಿದೆ ಮತ್ತು ಅನೇಕ ಜನರು ಅವರನ್ನು "ರಾಷ್ಟ್ರೀಯ ಹೀರೋ" ಎಂದು ಕರೆಯುತ್ತಿದ್ದಾರೆ. ಅವರ ತ್ಯಾಗವು ಅವರು ಸಾವಿನ ಭಯದಿಂದ ಪಾಕಿಸ್ತಾನದಿಂದ ಬಂದಿಲ್ಲ ಎಂದು ತೋರಿಸುತ್ತದೆ ಬದಲಿಗೆ ಅಹ್ಮದೀಯರ ಮೇಲೆ ವಿಧಿಸಲಾದ ಧಾರ್ಮಿಕ ನಿರ್ಬಂಧಗಳಿಂದ ಬೇಸತ್ತು ದೇಶವನ್ನು ತೊರೆದರು, ಅಲ್ಲಿ ಅವರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಹೆಸರನ್ನು ಉಲ್ಲೇಖಿಸದಂತೆ ತಡೆಯಲಾಗುತ್ತದೆ. ಈ ಘಟನೆಯಲ್ಲಿ ಮಡಿದ ಎಲ್ಲರಿಗೂ ಶ್ರದ್ಧಾಂಜಲಿ ಸಲ್ಲಿಸುವ ಉದ್ದೇಶದಿಂದ ಏಪ್ರಿಲ್ 21, ಭಾನುವಾರದಂದು ಆಸ್ಟ್ರೇಲಿಯಾ ಸರ್ಕಾರವು ಶಾಪಿಂಗ್ ಮಾಲ್ ಬಳಿ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದು ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಅದ್ನಾನ್ ಖಾದಿರ್ ಸಾಹಿಬ್ ಹೇಳುತ್ತಾರೆ. ಆಸ್ಟ್ರೇಲಿಯಾದ ಪ್ರಧಾನ ಮಂತ್ರಿ, ನ್ಯೂ ಸೌತ್ ವೇಲ್ಸ್‌ನ ಪ್ರಧಾನ ಮಂತ್ರಿ, ವಿರೋಧ ಪಕ್ಷದ ನಾಯಕ, ಸಂಸತ್ತಿನ ಸದಸ್ಯರು, ಸ್ಥಳೀಯ ಮತ್ತು ಇತರ ಕೌನ್ಸಿಲ್‌ಗಳ ಮೇಯರ್‌ಗಳು ಮತ್ತು ಪೊಲೀಸ್ ಮತ್ತು ಸೇನೆ ಮತ್ತು ನೌಕಾಪಡೆಯ ಹಿರಿಯ ಅಧಿಕಾರಿಗಳು, ಮಾಧ್ಯಮಗಳು ಮತ್ತು ಇತರ ಸಮಾಜದ ಇತರ ಉನ್ನತ ಶ್ರೇಣಿಯ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಬಹುಸಂಖ್ಯೆಯಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಜಮಾಅತ್‌ನ ಸದಸ್ಯರನ್ನೂ ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.

ಅವರ ಹಿರಿಯ ಸಹೋದರ ಮುದಸ್ಸಿರ್ ಬಶೀರ್ ಹೇಳುತ್ತಾರೆ: ಮೃತರು ಬಾಲ್ಯದಿಂದಲೂ ತುಂಬಾ ಶ್ರಮಶೀಲ, ಹರ್ಷಚಿತ್ತದಿಂದ ಮತ್ತು ಭಯವಿಲ್ಲದ ಮಗು. ನಮ್ಮ ತಂದೆ ತೀರಿಕೊಂಡಾಗ ಮೃತರಿಗೆ ಹನ್ನೊಂದು ವರ್ಷ ವಯಸ್ಸಾಗಿತ್ತು ಹಾಗಾಗಿ ನಮ್ಮ ಅಣ್ಣ ಮುಝಫ್ಫರ್ ಅಹ್ಮದ್ ಸಾಹಿಬ್ ನಮ್ಮನ್ನು ತಂದೆಯಂತೆ ಸಾಕಿದ್ದರು ಎನ್ನಲಾಗಿದೆ. ಮೃತನು ತನ್ನ ವಿದ್ಯಾಭ್ಯಾಸದ ಜೊತೆಗೆ ತನ್ನ ಸಹೋದರನಿಗೆ ತನ್ನ ವ್ಯವಹಾರದಲ್ಲಿ ಸಹಾಯ ಮಾಡುತ್ತಿದ್ದನು. ಮೃತರು ತುಂಬಾ ಶ್ರಮಜೀವಿ ಮತ್ತು ತಮ್ಮ ಒಡಹುಟ್ಟಿದವರನ್ನು ತುಂಬಾ ಪ್ರೀತಿಸುತ್ತಿದ್ದರು. ಅವರು ಸೌಮ್ಯ ಮತ್ತು ಹಾಸ್ಯ ಸ್ವಭಾವದವರಾಗಿದ್ದರು. ಒಡಹುಟ್ಟಿದವರೊಂದಿಗೆ ಎಂದಿಗೂ ಕೋಪಗೊಳ್ಳಲಿಲ್ಲ. ಮೃತರು ಜಮಾಅತ್ತಿನ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದರು. ಪಾಕಿಸ್ತಾನದಲ್ಲಿ ಮತ್ತು ನಂತರ ಶ್ರೀಲಂಕಾದಲ್ಲಿ ಮತ್ತು ನಂತರ ಆಸ್ಟ್ರೇಲಿಯಾದಲ್ಲಿ, ಅವರು ಉಳಿದುಕೊಂಡಿದ್ದಲ್ಲೆಲ್ಲಾ ಜಮಾಅತ್ತಿನ ಕೆಲಸ, ಕರ್ತವ್ಯಗಳಲ್ಲಿ ಸಕ್ರಿಯರಾಗಿದ್ದರು. ಖಿಲಾಫತ್‌ನೊಂದಿಗೆ ಬಹಳಷ್ಟು ಪ್ರಾಮಾಣಿಕತೆ ಮತ್ತು ನಿಷ್ಠೆ ಮತ್ತು ಪ್ರೀತಿಯ ಸಂಬಂಧವಿತ್ತು. ನನಗೆ ರಾಷ್ಟ್ರೀಯತೆ ಸಿಕ್ಕರೆ ಮೊದಲು ಲಂಡನ್‌ಗೆ ಹೋಗಿ ಖಲೀಫತುಲ್ ಮಸೀಹ್ ಅವರನ್ನು ಭೇಟಿಯಾಗುತ್ತೇನೆ ಎಂಬುದು ಅವರ ಆಸೆಗಳಲ್ಲಿ ಒಂದಾಗಿತ್ತು.

ಅವರ ಕಿರಿಯ ಸಹೋದರ ಶಿರಾಝ್ ಅಹ್ಮದ್ ಸಾಇಬ್ ಹೇಳುತ್ತಾರೆ: ಅವರು ಪವಿತ್ರ ಖುರ್‌ಆನ್ ಅನ್ನು ತುಂಬಾ ಹರ್ಷಚಿತ್ತದಿಂದ ಪಠಿಸುತ್ತಿದ್ದರು ಮತ್ತು ನಮಾಝಿನ ಬಗ್ಗೆ ತುಂಬಾ ಕಟ್ಟುನಿಟ್ಟಾಗಿರುತ್ತಿದ್ದರು. ಮುರಬ್ಬಿ ಕಮ್ರಾನ್ ಮುಬಶ್ಶಿರ್ ಸಾಹಿಬ್ ಅವರು ಹೇಳಿದರು, ಮೃತರಲ್ಲಿ ಜಮಾಅತ್ತಿನ ಹಿರಿಯರು ಮತ್ತು ಮುರಬ್ಬಿಯರನ್ನು ಗೌರವಿಸುವ ಗುಣವನ್ನು ಹೊಂದಿದ್ದರು ಮತ್ತು ಅವರು ನೀಡುವ ಯಾವುದೇ ಸೂಚನೆಯನ್ನು ನಿರಾಕರಿಸುತ್ತಿರಲಿಲ್ಲ ಎಂಬುದನ್ನು ನಾನು ಕಂಡಿದ್ದೇನೆ. ಅವರ ತಪ್ಪುಗಳನ್ನು ಅವರ ಗಮನಕ್ಕೆ ತಂದರೆ ಅವರಿಗೆ ಬೇಸರವಾಗದೆ ವಿನಮ್ರತೆಯಿಂದ ತಮ್ಮ ತಪ್ಪನ್ನು ಒಪ್ಪಿಕೊಂಡು ತಿದ್ದಿಕೊಳ್ಳುತ್ತಿದ್ದರು. ಮೃತರು ಧರ್ಮ ಮತ್ತು

ಖಿಲಾಫತ್ ಅನ್ನು ಪ್ರೀತಿಸುವ ವ್ಯಕ್ತಿ ಎಂದು ಅವರ ಸ್ನೇಹಿತರಲ್ಲಿ ಒಬ್ಬರಾದ ಅಹ್ಮದ್ ಇಬ್ರಾಹಿಂ ಹೇಳುತ್ತಾರೆ. ಜಮಾಅತ್‌ನ ಹುದ್ದೆದಾರರನ್ನು ಗೌರವಿಸುವವರು, ನಮಾಝ್‌ಗೆ ಬದ್ಧರಾಗಿದ್ದರು. ನಾನು ಅವರೊಂದಿಗೆ ಸಹೋದರ ಮತ್ತು ಸ್ನೇಹಿತನಾಗಿದ್ದೆ. ಒಮ್ಮೊಮ್ಮೆ ಏನಾದರು ಗದರಿಸಿದರೂ ಕಣ್ಣು ತಗ್ಗಿಸಿ ಕೇಳುತ್ತಿದ್ದರು, ಮುಂದೆ ದೂರು ನೀಡಲು ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತಿದ್ದರು. ಅವರು ತುಂಬಾ ತಮಾಷೆಯ ವ್ಯಕ್ತಿಯಾಗಿದ್ದರು. ಬ್ರಿಸ್ಬೇನ್ ಜಮಾಅತ್ತಿನ ಅಧ್ಯಕ್ಷರು ಹೇಳುತ್ತಾರೆ: ಕಳೆದ ತಿಂಗಳು ಮಾರ್ಚ್‌ನಲ್ಲಿ ಒಂದು ವಾರ ಬ್ರಿಸ್ಬೇನ್‌ಗೆ ಅವರು ಬಂದಿದ್ದರು ಮತ್ತು ಅವರು ಬರಲು ಕಾರಣವೆಂದರೆ ಅವರ ಸ್ನೇಹಿತರು ಮತ್ತು ಪ್ರೀತಿಪಾತ್ರರನ್ನು ಭೇಟಿಯಾಗುವುದಾಗಿ ಹೇಳಿದರು ಅದೇ ರೀತಿ ಅವರು ಹೇಳಿದರು: ಯಾರಾದರೂ ಮನದಲ್ಲಿ ಅಸಮಾಧಾನ ಅಥವಾ ಅನುಮಾನವಿದ್ದರೆ, ನಾನು ಅವರಲ್ಲಿ ಕ್ಷಮೆ ಕೇಳಿ ನಾನು ಸಮಾಧಾನ ಮಾಡಲು ಬಂದಿದ್ದೇನೆ ಎಂದರು. ಮತ್ತೆ ಮತ್ತೆ ಎಲ್ಲರ ಬಳಿ ಕ್ಷಮೆ ಕೇಳುತಿದ್ದರು. ಎಲ್ಲರೂ ಬಹುಶಃ ಖುದಾ ಹಾಫಿಝ್ ಎಂದು ಹೇಳಲು ಬಂದಿರಬಹುದು ಎಂದು ತೋರುತ್ತದೆ. ಅವರ ಸ್ನೇಹಿತರಲ್ಲೊಬ್ಬರಾದ ಶಜರ್ ಅಹ್ಮದ್ ಹೇಳುತ್ತಾರೆ: ಅವರು ಕಠಿಣ ಪರಿಶ್ರಮ, ನಿರ್ಭೀತ ಮತ್ತು ಕರ್ತವ್ಯನಿಷ್ಠ ವ್ಯಕ್ತಿಯಾಗಿದ್ದರು. ಮೃತರ ಜೊತೆಗೆ ಇತರರು ಗಾಯಗೊಂಡಿದ್ದಾರೆ ದಾಳಿಕೋರನು ಶಾಪಿಂಗ್ ಸೆಂಟರ್‌ಗೆ ಪ್ರವೇಶಿಸಿದ ತಕ್ಷಣ, ಜನರು ಅವನನ್ನು ನೋಡಿ ಓಡಲು ಪ್ರಾರಂಭಿಸಿದರು, ಸತ್ತವರು ಧೈರ್ಯದಿಂದ ಅವನನ್ನು ತಡೆಯಲು ಪ್ರಯತ್ನಿಸಿದರು ಮತ್ತು ಇತರರನ್ನು ರಕ್ಷಿಸುವಾಗ ಅವನ ಪ್ರಾಣವನ್ನು ಕಳೆದುಕೊಂಡರು ಎಂದು ಭದ್ರತಾ ಸಿಬ್ಬಂದಿ ಹೇಳಿದರು. ಸಾಮಾಜಿಕ ಜಾಲತಾಣಗಳಲ್ಲಿಯೂ ಫರಾಝ್ ತಾಹಿರ್ ಅವರಿಗೆ ಜನ ಗೌರವ ಸಲ್ಲಿಸುತ್ತಿದ್ದಾರೆ. ಕ್ರಿಸ್ ಮರ್ಫಿ ಅವರು ತಮ್ಮ ಕಾಮೆಂಟ್‌ನಲ್ಲಿ ಬರೆಯುತ್ತಾರೆ: ದಾಳಿಯ ಮೊದಲು, ನಾನು ಶಾಪಿಂಗ್ ಸೆಂಟರ್‌ನಲ್ಲಿ ಕರ್ತವ್ಯದಲ್ಲಿದ್ದ ಫರಾಜ್ ತಾಹಿರ್ ಎಂಬ ಉತ್ತಮ ಉಡುಗೆ ತೊಟ್ಟ ಭದ್ರತಾ ಸಿಬ್ಬಂದಿಯನ್ನು ನೋಡಿದೆ. ಜನರ ಜೀವ ಉಳಿಸಲು ತನ್ನ ಪ್ರಾಣವನ್ನೇ ಕೊಟ್ಟ ವೀರ. ರೆಬೆಕಾ ಐವರ್ಸ್ ಎಂಬ ಮಹಿಳೆ ಬರೆಯುತ್ತಾಳೆ: ಶಾಂತಿ ಮತ್ತು ಉತ್ತಮ ಭವಿಷ್ಯಕ್ಕಾಗಿ ತನ್ನ ದೇಶದಲ್ಲಿ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಲು ಆಸ್ಟ್ರೇಲಿಯಾಕ್ಕೆ ಬಂದ ಫರಾಝ್ ತಾಹಿರ್ ತನ್ನ ಸಮುದಾಯದಲ್ಲಿ ಬಹಳ ಜನಪ್ರಿಯನಾಗಿದ್ದನು ಮತ್ತು ಜನರನ್ನು ಉಳಿಸುವ ಮೂಲಕ ಮರಣಹೊಂದಿದ್ದಾರೆ. ಅವರ ಕುಟುಂಬ ಮತ್ತು ಸಮುದಾಯಕ್ಕೆ ನನ್ನ ಸಂತಾಪ ವ್ಯಕ್ತಪಡಿಸುತ್ತೇನೆ. ಇದು ಅತ್ಯಂತ ನೋವಿನ ಅಪಘಾತವಾಗಿದೆ. ಶಾಪಿಂಗ್ ಮಾಲ್‌ನಲ್ಲಿ ನೋಡಿದ ಮತ್ತು ಸುದ್ದಿಯನ್ನು ಓದಿದ ಜನರು ಇಂತಹ ಹಲವಾರು ಕಾಮೆಂಟ್‌ಗಳನ್ನು ಮಾಡಿದ್ದಾರೆ.

ಹಸೂರ್ ಅಹ್ಮದ್ ಜಾಮಿಯಾ ಅಹ್ಮದಿಯಾ ರಬ್ವಾಹ್ ವಿದ್ಯಾರ್ಥಿಯಾಗಿದ್ದಾರೆ ಅವರು ಬರೆಯುತ್ತಾರೆ: ಫರಾಝ್ ತಾಹಿರ್ ಸಾಹಿಬ್ ನನ್ನ ಸೋದರಸಂಬಂಧಿಯಾಗದ್ದರು. ಅವರು ಉತ್ತಮ ವ್ಯಕ್ತಿತ್ವ ಹೊಂದಿದ್ದರು. ದಿನದ ಐದು ಹೊತ್ತಿನ ನಮಾಝ್‌ಗಳನ್ನು ನಿಯಮಿತವಾಗಿ ನಿರ್ವಹಿಸುತ್ತಿದ್ದರು. ಮತ್ತು ಇತರರನ್ನು ನಿರ್ವಹಿಸಲು ಉಪದೇಶಿಸುವವರಾಗಿದ್ದರು, ಅವರು ಭೇಟಿಯಾದಾಗಲೆಲ್ಲಾ ನಗುತ್ತಿದ್ದರು. ಅವರು ನನ್ನನ್ನು ತನ್ನ ಕಿರಿಯ ಸಹೋದರನಂತೆ ಪರಿಗಣಿಸಿದರು. ಏನಾದರೂ ವಿವರಿಸಬೇಕಾದರೆ ಬಹಳ ಪ್ರೀತಿಯಿಂದ ವಿವರಿಸುತ್ತಿದ್ದರು. ನಾನು ನಿಮಗಾಗಿ ಪ್ರಾರ್ಥಿಸುತ್ತೇನೆ, ನೀವು ನನಗಾಗಿ ಪ್ರಾರ್ಥಿಸಬೇಕು ಎಂದು ಅವರು ಯಾವಾಗಲೂ ದುಆಗಾಗಿ ಹೇಳುತ್ತಿದ್ದರು. ಅವರು ಹೇಳುತ್ತಾರೆ: ಅವರು ಹುತಾತ್ಮರಾದ ದಿನದಂದು ಕೊನೆಯ ಬಾರಿಗೆ ಆಸ್ಟ್ರೇಲಿಯಾದಲ್ಲಿ ಬೆಳಿಗ್ಗೆ ನಾಲ್ಕು ಗಂಟೆಗೆ ಕರೆ ಬಂದಿತು. ಅವರ ಅಣ್ಣ ಅವರಿಗೆ ಹೇಳಿದರು ಬೆಳಗಿನ ಜಾವ ನಾಲ್ಕು ಗಂಟೆಯಾಗಿದೆ, ಈಗ ನೀನು ಕೆಲಸಕ್ಕೆ ಹೋಗಬೇಕಾಗಿದೆ, ನೀನು ಮಲಗು ಎಂದು ಹೇಳಿದರು. ಅದಕ್ಕೆ ಅವರು ಹೇಳಿದರು: ನಾನು ಈಗಷ್ಟೇ ತಹಜ್ಜುದ್ ನಮಾಝನ್ನು ನಿರ್ವಹಿಸಿ ನಿಮ್ಮೆಲ್ಲರಿಗಾಗಿ ಪ್ರಾರ್ಥಿಸಿದ್ದೇನೆ. ನಂತರ ಫಜ್ರ್ ನಮಾಝ್ ಮಾಡಿ ಕೆಲಸಕ್ಕೆ ಹೋಗುತ್ತೇನೆ. ಇದು ಮಲಗುವ ಸಮಯವಲ್ಲ. ಅದು ಅವನ ಬೆಳಗಿನ ಪಾಳಿಯ ಮೊದಲ ದಿನವಾಗಿದೆ. ಮೊದಲು ಸಂಜೆಯ ಪಾಳಿ ಇರುತ್ತಿತ್ತು. ಮತ್ತೆ ಅವರು ಮುಂದೆ ಬರೆಯುತ್ತಾರೆ: ಇದು ನಮ್ಮ ಕುಟುಂಬದ ಮೂರನೇ ಶಹಾದತ್ ಆಗಿದೆ. ಮೊದಲಿಗೆ, ನನ್ನ ಚಿಕ್ಕಪ್ಪ (ಸೂದರ ಮಾವ) ಮೊಹಮ್ಮದ್ ನವಾಝ್ 11 ಸೆಪ್ಟೆಂಬರ್ 2012 ರಂದು ಒರಂಗಿ ಟೌನ್ ಕರಾಚಿಯಲ್ಲಿ ಹುತಾತ್ಮರಾದರು. ನಂತರ ಅವರ ಚಿಕ್ಕಪ್ಪ (ತಾಯಿಯ ಸಹೋದರ) ಇಜಾಝ್ ಅಹ್ಮದ್ ಸಾಹಿಬ್ ಅವರು ಸೆಪ್ಟೆಂಬರ್ 4, 2013 ರಂದು ಓರಂಗಿ ಟೌನ್ ಕರಾಚಿಯಲ್ಲಿ ಹುತಾತ್ಮರಾಗಿದ್ದರು ಮತ್ತು ಈಗ ಫರಾಝ್ ಅಹ್ಮದ್ ಸಾಹಿಬ್ ಹುತಾತ್ಮರಾಗಿದ್ದಾರೆ.

ಒಟ್ಟಿನಲ್ಲಿ ನಾನು ಮೊದಲೇ ಹೇಳಿದಂತೆ ಸಾವಿಗೆ ಹೆದರಿ ದೇಶ ಬಿಟ್ಟು ಹೋಗಿಲ್ಲ, ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಬಂದಿದ್ದರು. ಸರ್ವಶಕ್ತನಾದ ಅಲ್ಲಾಹನು ಮೃತರ ಪದವಿಗಳನ್ನು ವರ್ಧಿಸಲಿ ಮತ್ತು ಎಲ್ಲಾ ದುಃಖಿತರಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ.

(ಅಲ್-ಫಜಲ್ ಇಂಟರ್‌ನ್ಯಾಶನಲ್ ಡೈಲಿ, ಮೇ 17, 2024, ಪುಟ 2-6)

...*...*...*...

**ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ.

**(ಮಲ್‌ಫೂಝಾತ್, ಸಂಪುಟ-3, ಪುಟ-284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

***129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129[ನೇ] (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27[ನೇ] ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**(ಬದರ್ ಸಂಚಿಕೆ–21ರ ಪುಟ ಸಂಖ್ಯೆ–12ರ ಉಳಿದ ಭಾಗ)**

ಅವರು 11 ವರ್ಷಗಳ ಕಾಲ ಸೆರಾ ಲಿಯೋನ್, ಗಯಾನಾ ಮತ್ತು ಜಾಂಬಿಯಾದಲ್ಲಿ ಸೇವೆ ಸಲ್ಲಿಸಿದರು ಮತ್ತು ಅವರ ಕುಟುಂಬವಿಲ್ಲದೆ ಇಡೀ ಅವಧಿಯನ್ನು ವಿದೇಶದಲ್ಲಿ ಕಳೆದರು ಎಂದು ಅವರ ದಾಖಲೆಗಳು ಹೇಳುತ್ತವೆ. ಅವರ ಪತ್ನಿ ಮತ್ತು ಅವರ ತ್ಯಾಗವನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರು ಭಾಷಣದಲ್ಲಿ ಉಲ್ಲೇಖಿಸಿದ್ದಾರೆ.

ಅವರ ಪತ್ನಿ ಅಮತುಲ್ ಮನ್ನನ್ ಖಮರ್ ಸಾಹಿಬಾ ಫಝುಲ್ ಉಮರ್ ರಬ್ವಾಹ್ ಬಾಲಕಿಯರ ಶಾಲೆಯ ಮಾಜಿ ಮುಖ್ಯೋಪಾಧ್ಯಾಯಿನಿಯಾಗಿದ್ದರು. ಅಲ್ಲಾಹನು ಅವರಿಗೆ ಸೇವೆಯಲ್ಲಿ ಮುನ್ನಡೆಸುತ್ತಿರುವ ನಾಲ್ಕು ಪುತ್ರಿಯರನ್ನು ಅನುಗ್ರಹಿಸಿದ್ದಾನೆ ಮತ್ತು ಅವರೆಲ್ಲರೂ ಉತ್ತಮ ಶಿಕ್ಷಣ ಪಡೆದಿದ್ದಾರೆ.

ಅವರಿಗೆ ಡಾ. ಅಮತುಲ್ ಶುಕೂರ್ ಸಾಹಿಬಾ ಎಂಬ ಮಗಳಿದ್ದಾಳೆ, ಅವಳು ಡಾ. ಅಬ್ದುಲ್ ಹಫೀಝ್ ಸಆಹಿಬ್ ಅವರ ಪತ್ನಿಯಾಗಿದ್ದಾರೆ. ಇವರು ಅಮೆರಿಕದಲ್ಲಿದ್ದಾರೆ. ಅವರು ಹನ್ನೊಂದು ವರ್ಷಗಳ ಕಾಲ ಗ್ಯಾಂಬಿಯಾ ಮತ್ತು ತಾಂಜಾನಿಯಾದಲ್ಲಿ ನುಸ್ರತ್ ಜಹಾನ್ ಯೋಜನೆಯಡಿಯಲ್ಲಿ ಸೇವೆ ಸಲ್ಲಿಸಿದರು.

ಅವರ ಶೈಕ್ಷಣಿಕ ಕಾರ್ಯಗಳೂ ಇವೇ. ಅವರು ಮೂರು ಪುಸ್ತಕಗಳ ಲೇಖಕರಾಗಿದ್ದರು. ಖಾಮೂಸ್ ಅಲ್–ರೊಯಾ, (ಕನಸುಗಳ ವ್ಯಾಖ್ಯಾನ. ಅಕ್ಷರಗಳ ಪ್ರಕಾರ) ಸೂಫಿಸಂ. ಆಧ್ಯಾತ್ಮಿಕ ವಿಜ್ಞಾನ, ಇದು ಅವರ ಎರಡನೇ ಪುಸ್ತಕ ಮತ್ತು ಮೂರನೇ ಪುಸ್ತಕ ಯಾದೆ ವಯ್ಯಾಮ್, ಅವರ ಆತ್ಮಚರಿತ್ರೆಯ ಸನ್ನಿವೇಶಗಳು.

ಆಸ್ಟ್ರೇಲಿಯಾದ ಇನಾಮ್–ಉಲ್–ಹಕ್ ಕೌಸರ್ ಮಿಷನರಿ–ಇನ್–ಚಾರ್ಜ್ ಬರೆಯುತ್ತಾರೆ: ಅವರು ಉತ್ತಮ ಶಿಕ್ಷಕರಾಗಿದ್ದರು ಮತ್ತು ವಿದ್ಯಾರ್ಥಿಗಳನ್ನು ಸಹನೆ ಮತ್ತು ನಮ್ರತೆಯಿಂದ ನೋಡಿಕೊಳ್ಳುತ್ತಿದ್ದರು. ನಾನು ಬ್ರಿಟಿಷ್ ಗಯಾನಾ ಪ್ರವಾಸಕ್ಕೆ ಹೋದಾಗ, ಮೂರ್ನಾಲ್ಕು ಹಳ್ಳಿಗಳಲ್ಲಿ, ಅವರು ಸ್ಥಾಪಿಸಿದ ಜಮಾಅತ್‌ಗಳಲ್ಲಿ, ಹಳೆಯ ಜನರೆಲ್ಲರೂ ಅವರನ್ನು ಬಹಳ ಒಳ್ಳೆಯ ರೀತಿಯಲ್ಲಿ ಉಲ್ಲೇಖಿಸಿ ಅವರ ಚಿತ್ರವನ್ನು ತಮ್ಮೊಂದಿಗೆ ಇಟ್ಟುಕೊಂಡಿದ್ದಾರೆ ಎಂದು ಹೇಳಲಾಗುತ್ತದೆ. ಅಲ್ಲಾಹನು ಅವರ ಮೂಲಕ ಬ್ರಿಟಿಷ್ ಗಯಾನಾದಲ್ಲಿ ಒಂದು ದೃಢವಾದ ಜಮಾಅತ್ ಅನ್ನು ಸ್ಥಾಪಿಸಿದನು.

ಸುರೀನಾಮ್ ಜಮಾಅತ್‌ನ ಮುರಬ್ಬಿಯಾದ ಲಈಖ್ ಮುಶ್ತಾಖ್ ಸಾಹಿಬ್ ಬರೆಯುತ್ತಾರೆ ಮೌಲಾನಾ ಮೀರ್ ಗುಲಾಮ್ ಅಹ್ಮದ್ ನಸೀಮ್ ಸಾಹಿಬ್ ಅವರು ಗಯಾನಾದಲ್ಲಿದ್ದಾಗ 1967 ರಿಂದ 1969 ರವರೆಗೆ ಸುರಿನಾಮ್‌ಗೆ ಮೂರು ಪ್ರವಾಸಗಳನ್ನು ಮಾಡಿದರು ಮತ್ತು ವಾರಗಟ್ಟಲೆ ಇಲ್ಲಿಯೇ ಇದ್ದು ಈ ಜಮಾಅತ್ ಅನ್ನು ಪುನಃ ಸಕ್ರಿಯಗೊಳಿಸಿದರು. ಆ ಸಮಯದಲ್ಲಿ, ವಿವಿಧ ಕಾರಣಗಳಿಂದ, ಜಮಾಅತ್‌ನ ಬಹುಪಾಲು ಸದಸ್ಯರು ಬೇರ್ಪಟ್ಟರು ಮತ್ತು ಕೆಲವು ಅಹ್ಮದಿಯರು ಉಪಸ್ಥಿತರಿದ್ದರು. ಕೇಂದ್ರದ ಸಂಪರ್ಕವನ್ನೂ ಕಡಿತಗೊಳಿಸಲಾಗಿತ್ತು. ಈ ಸಂದರ್ಭಗಳಲ್ಲಿ, ಗೌರವಾನ್ವಿತ ಮೌಲಾನಾ ಗುಲಾಮ್ ಅಹ್ಮದ್ ನಸೀಮ್ ಸಾಹಿಬ್ ಅವರು ಗಯಾನಾದಿಂದ ಸುರಿನಾಮ್‌ಗೆ ಬಂದರು ಮತ್ತು 15 ಸೆಪ್ಟೆಂಬರ್ 1967 ರಂದು ಮೊದಲ ಸಭೆಯನ್ನು ನಡೆಸಿದರು, ಇದರಲ್ಲಿ ಆರು ಜನರು ಭಾಗವಹಿಸಿದರು ಮತ್ತು ಜಮಾಅತ್‌ನೊಂದಿಗೆ ಅವಿನಾಭಾವ ಸಂಬಂಧವನ್ನು ಸ್ಥಾಪಿಸಲು ಪ್ರತಿಜ್ಞೆ ಮಾಡಿದರು. ಆ ದಿನಗಳಲ್ಲಿ ಪಾಕಿಸ್ತಾನದ ಮೌಲ್ವಿ ಶಾಹ್ ಅಹ್ಮದ್ ನೂರಾನಿ ಕೂಡ ಸುರಿನಾಮ್‌ಗೆ ಬಂದು ಜಮಾಅತ್ ವಿರುದ್ಧ ದ್ವೇಷಪೂರಿತ ಭಾಷಣಗಳನ್ನು ಮಾಡುತ್ತಿದ್ದನು. ಮೌಲಾನಾ ನಸೀಮ್ ಸಾಹಿಬ್ ಅವರು ಹಲವಾರು ಸಭೆಗಳನ್ನು ನಡೆಸುವ ಮೂಲಕ ಅವರ ಆರೋಪಗಳಿಗೆ ಉತ್ತರಗಳನ್ನು ನೀಡಿದರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸತ್ಯಾಸತ್ಯತೆಯ ಬಗ್ಗೆ ರೇಡಿಯೊದಲ್ಲಿ ಮೂರು ಕಾರ್ಯಕ್ರಮಗಳನ್ನು ಮಾಡಿದರು. ಮೇ 1968 ರಲ್ಲಿ ಅವರ ಎರಡನೇ ಭೇಟಿಯ ಸಮಯದಲ್ಲಿ, ಅವರು ನಿರ್ಮಾಣ ಹಂತದಲ್ಲಿರುವ ಮಸೀದಿಯೊಂದಿಗೆ ಮಿಷನ್ ಹೌಸ್‌ನ ಅಡಿಪಾಯವನ್ನು ಹಾಕಿದರು ಮತ್ತು ಅದರ ನಿರ್ಮಾಣವು ಕೆಲವೇ ವರ್ಷಗಳಲ್ಲಿ ಪೂರ್ಣಗೊಂಡಿತು. ಲಾಹೋರಿ ಜಮಾಅತ್‌ನ ಇಮಾಮ್ ಅಬ್ದುಲ್ ರಹೀಮ್ ಜಗು ಮತ್ತು ಸುನ್ನಿ ಜಮಾಅತ್‌ನ ಇಮಾಮ್ ಚರ್ಚೆಗೆ ಪಂಥಾಹ್ವಾನ ಮಾಡಿಸರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸತ್ಯಾಂಶಕ್ಕೆ ಕುರಿತು ಅವರು ಹಲವಾರು ಫೋಲ್ಡರ್‌ಗಳನ್ನು ಪ್ರಕಟಿಸಿದರು.

ಜೂನ್ 21, 1968 ರಂದು, ಜಮಾಅತ್ ಸದಸ್ಯರೊಬ್ಬರ ಮನೆಯಲ್ಲಿ ನಡೆದ ಪ್ರಶ್ನೋತ್ತರ ಸಭೆಯಲ್ಲಿ, ದುಷ್ಟ ಮನಸ್ಸಿನ ಮುಸ್ಲಿಮರು ಜಮಾಅತ್‌ನ ಸದಸ್ಯರ ಮೇಲೆ ದಾಳಿ ಮಾಡಿದರು ಮತ್ತು ಹೆಡ್ ಟೇಬಲ್ ಅನ್ನು ಕೊಠಡಿಯ ಬಾಗಿಲಿನ ಮುಂದೆ ಇಡಲಾಗಿದೆ ಎಂದು ಹೇಳಿದರು. ಮೌಲಾನಾ ಸಾಹಿಬ್ ಅವರ ಬಲ ಮತ್ತು ಎಡಭಾಗದಲ್ಲಿ ಕುಳಿತಿದ್ದ ಜನರು ಅವರನ್ನು ಕೋಣೆಯೊಳಗೆ ತಳ್ಳಿದರು ಮತ್ತು ಹೊರಗಿನಿಂದ ಬಾಗಿಲು ಮುಚ್ಚಿದರು. ದಾಳಿಕೋರರು ಜಮಾಅತ್ತಿನ ಸದಸ್ಯರ ಮೇಲೆ ತೀವ್ರವಾಗಿ ಹಲ್ಲೆ ನಡೆಸಿ ಮರದ ಕುರ್ಚಿಗಳಿಂದ ಥಳಿಸಿದ್ದಾರೆ. ಈ ಘಟನೆಯಲ್ಲಿ ಪುರುಷರ ಹೊರತಾಗಿ ಅನೇಕ ಮಹಿಳೆಯರೂ ಗಂಭೀರವಾಗಿ ಗಾಯಗೊಂಡಿದ್ದಾರೆ. ಮೌಲಾನಾ ಸಾಹಿಬರು ನನ್ನನ್ನು ಹೊರಗೆ ಕರೆದುಕೊಂಡು ಹೋಗುವಂತೆ ಕೋಣೆಯೊಳಗಿಂದ ಕೂಗುತ್ತಲೇ ಇದ್ದರು. ನಾನೂ ಕೂಡ ಅವರೊಂದಿಗೆ ಹೋರಾಡುತ್ತೇನೆ ಎಂದು ಹೇಳಿದರು. ಅವರು ತುಂಬಾ ಧೈರ್ಯಶಾಲಿಯಾಗಿದ್ದರು. ದುಷ್ಕರ್ಮಿಗಳು ಮೌಲಾನಾ ಸಾಹಿಬ್ ಅವರ ಪಾಸ್‌ಪೋರ್ಟ್ ಮತ್ತು ಇತರ ಸಾಮಾನುಗಳ ಬ್ರೀಫ್‌ಕೇಸ್ ಅನ್ನು ಸಹ ತೆಗೆದುಕೊಂಡು ಹೋಗಿದ್ದಾರೆ. ಹಲವು ದಿನಗಳ ನಂತರ ಅದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಆದಾಗ್ಯೂ, ಈ ಘಟನೆಯ ನಂತರ, ಅವರು ಪೊಲೀಸ್ ಮತ್ತು ಸಂಬಂಧಿತ ಅಧಿಕಾರಿಗಳನ್ನು ಸಂಪರ್ಕಿಸಿ ಜಮಾಅತ್‌ನ ಸದಸ್ಯರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿದರು.

ಸಾಂಸ್ಕೃತಿಕ ಕೇಂದ್ರದಲ್ಲಿ ಇಸ್ಲಾಂ ಧರ್ಮ ಮತ್ತು ಸಮಕಾಲೀನ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಜಮಾಅತ್‌ನ ಸದಸ್ಯರಿಗೆ ಕೇಂದ್ರದೊಂದಿಗೆ ನಿರಂತರ ಸಂಪರ್ಕದಲ್ಲಿರಲು ಸಲಹೆ ನೀಡಿದರು. ಹೀಗೆ ನಿಮ್ಮ ಪ್ರಯತ್ನದಿಂದ ಚದುರಿದ ಸಭೆಯೊಂದು ಮತ್ತೆ ಕಾಲೆ ಮೇಲೆ ನಿಂತಿತು, ಅಲ್ಲಾಹನ ಅನುಗ್ರಹದಿಂದ ನಂತರದ ಧರ್ಮ ಪ್ರಚಾರಕರೂ ಅದನ್ನು ಬಲಪಡಿಸಿ ಈಗ ಬಲಿಷ್ಠವಾದ ಅದು ಜಮಾಅತ್ ಆಗಿದೆ.

ಅಲ್ಲಾಹನು ಮೃತರ ಪದವಿಯನ್ನು ಹೆಚ್ಚಿಸಲಿ ಮತ್ತು ಅವರ ಮಕ್ಕಳು ಮತ್ತು ಪೀಳಿಗೆಗಳಲ್ಲಿ ಈ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲು ಸೌಭಾಗ್ಯ ನೀಡಲಿ.

ಮುಂದಿನ ಉಲ್ಲೇಖವೆಂದರೆ ಅಮೇರಿಕ ಜಮಾಅತ್‌ನ ಮಾಜಿ ಅಮೀರರಾದ ಗೌರವಾನ್ವಿತ ಡಾ. ಎಹ್ಸಾನುಲ್ಲಾಹ್ ಝಫರ್ ಸಾಹಿಬ್ ಅವರದ್ದಾಗಿದೆ. ಅವರು ಇತ್ತೀಚೆಗೆ ಎಂಬತ್ತೊಂದನೇ ವಯಸ್ಸಿನಲ್ಲಿ (81) ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು. ದೀರ್ಘಕಾಲದವರೆಗೆ, ಅವರು ಸ್ಥಳೀಯ ಅಧ್ಯಕ್ಷರಾಗಿ, ಅಮೇರಿಕದ ಜಮಾಅತ್‌ನ ಉಪ ಅಮೀರ್ ಆಗಿ ಮತ್ತು 2002 ರಿಂದ 2016 ರವರೆಗೆ ಜಮಾಅತ್ ಅಮೇರಿಕದ ಅಮೀರ್ ಆಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಅವರಲ್ಲಿ ಅನೇಕ ಗುಣಲಕ್ಷಣಗಳಿದ್ದವು. ಅವರು ತುಂಬಾ ಪ್ರೀತಿಯ ಮತ್ತು ದಯೆಯ ವ್ಯಕ್ತಿಯಾಗಿದ್ದರು. ಅವರು ಬಹಳ ವಿಶಾಲ ಮನೋಭಾವವನ್ನು ಹೊಂದಿದ್ದರು. ಅವರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಕೆಲವು ವರ್ಷಗಳ ಹಿಂದೆ ಅವರ ಪತ್ನಿ ಅಪಘಾತದಲ್ಲಿ ಸಾವನ್ನಪ್ಪಿದರು ಮತ್ತು ಅವರ ಪುತ್ರನೂ ಸಹ ಮೃತರಾಗಿದ್ದರು. ಅವರು ಆ ಆಘಾತಗಳನ್ನು ಬಹಳ ತಾಳ್ಮೆ ಮತ್ತು ಧೈರ್ಯದಿಂದ ಸಹಿಸಿಕೊಂಡರು ಮತ್ತು ಅವರ ನಾಲಿಗೆಯ ಮೇಲೆ ಎಂದಿಗೂ ಅನುಮಾನಗಳನ್ನು ಹುಟ್ಟುಹಾಕಲಿಲ್ಲ.

ನಿಮ್ಮ ಪುತ್ರಿ ಡಾ. ಹಾನಾ ಮರ್ಯಮ್ ಹೇಳುತ್ತಾರೆ: ನನ್ನ ತಂದೆ ತುಂಬಾ ಒಳ್ಳೆಯ ಮತ್ತು ಧರ್ಮನಿಷ್ಠ ವ್ಯಕ್ತಿಯಾಗಿದ್ದರು. ನಮಾಝ್ ನಿರ್ವಹಣೆ, ಪವಿತ್ರ ಖುರ್‌ಆನ್‌ನ ಪಠಣ ಹಾಗೂ ಚಂದಗಳನ್ನು ನಿಯಮಿತವಾಗಿ ನೀಡುವವರಾಗಿದ್ದರು. ಅದರೊಂದಿಗೆ ಅಲ್ಲಾಹನೊಂದಿಗೆ ದೃಢ ಸಂಬಂಧ ಹೊಂದುವುದರಲ್ಲಿ ತೊಡಗಿದ್ದರು. ದಿನಕ್ಕೆ ಅನೇಕ ಬಾರಿ, ಅವರು ಏಕಾಂಗಿಯಾಗಿ ಅಥವಾ ಸಭೆಗಳಲ್ಲಿ ಕುಳಿತುಕೊಂಡು ತಮ್ಮ ಕೈಗಳನ್ನು ಮೇಲಕ್ಕೆತ್ತಿ ಪ್ರಾರ್ಥಿಸುತ್ತಿದ್ದರು. ಇತರರು ನನ್ನ ಬಗ್ಗೆ ಏನು ಯೋಚಿಸುತ್ತಾರೆ ಎಂದು ಅವರು ಎಂದಿಗೂ ಯೋಚಿಸುತ್ತಿರಲಿಲ್ಲ. ಜೀವನದ ಕಷ್ಟಗಳ ಹೊರತಾಗಿಯೂ, ಅವರು ಯಾವಾಗಲೂ ತಮ್ಮ ಮಕ್ಕಳಿಗೆ ಎಲ್ಲಾ ಸಂದರ್ಭಗಳಲ್ಲಿ ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞರಾಗಿರಬೇಕು ಎಂದು ಬೋಧಿಸಿದರು. ಅವರು ಮುಂದೆ ಹೇಳುತ್ತಾರೆ: ನನ್ನ ತಂದೆ ಖಿಲಾಫತ್‌ನೊಂದಿಗೆ ಅತ್ಯಂತ ಪ್ರಾಮಾಣಿಕ ಮತ್ತು ನಿಷ್ಠರಾಗಿದ್ದರು. ಅವರ ಧಾರ್ಮಿಕ, ಐತಿಹಾಸಿಕ ಮತ್ತು ರಾಜಕೀಯ ಜ್ಞಾನವು ಬಹಳ ವಿಸ್ತಾರವಾಗಿತ್ತು. ನಾನು ಕೊನೆಯದಾಗಿ ಆಸ್ಪತ್ರೆಗೆ ಭೇಟಿ ನೀಡಿದ ದಿನವೂ ಪತ್ರಿಕೆ ಓದಿ ನನ್ನ ಖುತ್‌ಬವನ್ನು ಆಲಿಸಿ ಇತಿಹಾಸಕ್ಕೆ ಸಂಬಂಧಿಸಿದ ಸಂದರ್ಶನಗಳನ್ನು ವೀಕ್ಷಿಸಿ ನನಗೂ ನೋಡುವಂತೆ ಹೇಳಿದರು. ಅವರು ಎಂದಿಗೂ ತಮ್ಮ ಜ್ಞಾನ ಮತ್ತು ಅಭಿಪ್ರಾಯಗಳನ್ನು ಇತರರ ಜ್ಞಾನ ಮತ್ತು ಅಭಿಪ್ರಾಯಕ್ಕೆ ಆದ್ಯತೆ ನೀಡುತ್ತಿರಲಿಲ್ಲ, ಬದಿಗೆ ಅದನ್ನು ಬಹಳ ಸಹನೆಯಿಂದ, ಗಾಂಭೀರ್ಯದಿಂದ ನಿರ್ಣಯಿಸಲು ಆಲಿಸುತ್ತಿದ್ದರು. ಅವರು ಪವಿತ್ರ ಖುರ್‌ಆನ್ ಮತ್ತು ಅದರ ಅನುವಾದದ ಆಳವಾದ ಜ್ಞಾನವನ್ನು

ಹೊಂದಿದ್ದರು. ಪವಿತ್ರ ಖುರ್‌ಆನ್‌ನ ಪದಗಳ ಅರ್ಥವನ್ನು ನಮಗೆ ತಿಳಿಸುವುದರ ಜೊತೆಗೆ, ಈ ಬೋಧನೆಗಳು ನಮ್ಮ ಜೀವನದ ಮೇಲೆ ಯಾವ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ಸಹ ಹೇಳುತ್ತಿದ್ದರು. ವೈಯಕ್ತಿಕ ಜೀವನದಲ್ಲಿ, ಹಝ್ರತ್ ಪೈಗಂಬರ್(ಸ.ಅ) ರ ಪ್ರೀತಿಯ ಅಂಶವೂ ಕಂಡುಬರುತ್ತದೆ. ಅಂತೆಯೇ ಅವರಲ್ಲಿ ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞತೆಯು ಇತ್ತು. ಅವರು ಹೇಳುತ್ತಾರೆ: ಒಂದು ದಿನ ಊಟ ಮಾಡುವಾಗ ಪ್ರಾರ್ಥನೆ ಮಾಡಲು ಪ್ರಾರಂಭಿಸಿದರು. ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬೀಯರು ಕೆಲವೊಮ್ಮೆ ಆಹಾರದ ಕೊರತೆಯನ್ನು ಹೊಂದಿದ್ದರು ಅವರು ಖರ್ಜೂರ ಮತ್ತು ರೊಟ್ಟಿಯನ್ನು ಅನ್ನು ವಿನೆಗರ್‌ನಲ್ಲಿ ಅದ್ದಿ ತಿನ್ನುತ್ತಿದ್ದರು ಎಂದು ಅವರು ನಮಗೆ ಹೇಳಿದರು. ಇಷ್ಟೆಲ್ಲಾ ನಮ್ಮ ಬಳಿ ಇದ್ದರೂ, ನಾವು ಹೆಚ್ಚಿನದಕ್ಕಾಗಿ ಹಾತೊರೆಯುತ್ತೇವೆ. ನಾವು ಕೃತಜ್ಞರಾಗಿರಬೇಕು. ಅವರು ಕಷ್ಟದಲ್ಲಿರುವವರಿಗೆ ಸಹಾಯ ಮಾಡುವಲ್ಲಿ ಅಪಾರ ಉತ್ಸಾಹವನ್ನು ಹೊಂದಿದ್ದರು.

1967ರಲ್ಲಿ ಅವರಿಗೆ ಮಕ್ಕಾಗೆ ಹೋಗುವ ಅವಕಾಶ ಲಭಿಸಿತು. ಮಾರ್ಗದಲ್ಲಿ ಅವರು ತಮ್ಮ ಬಾಯಿಯಿಂದ ಏನನ್ನೂ ಹೇಳದ ವ್ಯಕ್ತಿಯನ್ನು ನೋಡಿದನು ಆದರೆ ಅವನ ಕಣ್ಣುಗಳು ಸಹಾಯ ಮತ್ತು ಹಸಿವನ್ನು ವ್ಯಕ್ತಪಡಿಸಿದವು. ನನ್ನ ತಂದೆಯು ಆ ವ್ಯಕ್ತಿಗೆ ತನ್ನಲ್ಲಿದ್ದ ಸ್ವಲ್ಪ ಹಣವನ್ನು ನೀಡಿದರು ಮತ್ತು ಅವನು ತನ್ನ ಕಣ್ಣುಗಳಿಂದ ಅವರಿಗೆ ಧನ್ಯವಾದ ಅರ್ಪಿಸಿದನು ಮತ್ತು ಆಹಾರದ ಅಂಗಡಿಗೆ ಹೋದನು. ಅವರು ಹೇಳುತ್ತಾರೆ: ಕೆಲವು ವರ್ಷಗಳ ಹಿಂದೆ, ಅವರು ಮೂರು ಟರ್ಕಿಶ್ ಕಾರ್ಪೆಟ್ಗಳನ್ನು ಖರೀದಿಸಿ ಮನೆಗೆ ತಂದರು. ಇದನ್ನು ನೋಡಿದ ನನ್ನ ತಾಯಿ ನೀವು ತುಂಬಾ ಬೆಲೆಬಾಳುವ ವಸ್ತುಗಳನ್ನು ಖರೀದಿಸಿದ್ದೀರಿ, ನಮಗೆ ಅವುಗಳ ಅವಶ್ಯಕತೆಯೂ ಇರಲಿಲ್ಲ ಎಂದು ಹೇಳಿದರು. ಅವುಗಳನ್ನು ನನಗೆ ಮಾರಾಟ ಮಾಡಿದ ಮಹಿಳೆಗೆ ಇದು ಒಂದು ಆದಾಯದ ಮೂಲವಾಗಿದೆ ಎಂದು ಅವರು ನನ್ನ ತಾಯಿಗೆ ಹೇಳಿದರು. ನಾನು ಅವನ ಉತ್ಸಾಹವನ್ನು ನೋಡಿದೆ ಮತ್ತು ಅವರಿಗೆ ಸಹಾಯ ಮಾಡಲು ಬಯಸಿದೆ. ಯಾವಾಗಲೂ ಇತರರ ಯೋಗ್ಯತೆಗಳನ್ನು ನೋಡುತ್ತಿದ್ದರು ಮತ್ತು ಅವರ ತಪ್ಪುಗಳನ್ನು ನೋಡುತ್ತಿರಲಿಲ್ಲ. ಕಷ್ಟಗಳು ಎದುರಾದಾಗ ಅವರು ಎಂದಿಗೂ ಗಾಬರಿಯಾಗಬಾರದು ಎಂದು ಅವರು ತಮ್ಮ ಮಕ್ಕಳಿಗೆ ಸಲಹೆ ನೀಡುತ್ತಿದ್ದರು. ಒಬ್ಬನು ಯಾವಾಗಲೂ ಎಲ್ಲದಕ್ಕೂ ಸರ್ವಶಕ್ತನಾದ ಅಲ್ಲಾಹನನ್ನು ಕೇಳಬೇಕು ಮತ್ತು ದೇವರು ಕೊಡುವದರಲ್ಲಿ ತೃಪ್ತನಾಗಬೇಕು. ನಮ್ಮೆಲ್ಲರಿಗೂ ಅದೇ ಸಲಹೆ ನೀಡುತ್ತಿದ್ದರು.

ಡಾ. ನಸೀಮ್ ರಹಮತುಲ್ಲಾ ಸಾಹಿಬ್ ಅವರ ಬಗ್ಗೆ ಬರೆಯುತ್ತಾರೆ, ನಾನು 1989 ರಿಂದ ಡಾ.ಎಹ್ಸಾನುಲ್ಲಾ ಝುಫರ್ ಸಾಹಿಬ್ ಅವರೊಂದಿಗೆ ಕೆಲಸ ಮಾಡುತ್ತಿದ್ದೇನೆ. ಅವರು ತುಂಬಾ ಒಳ್ಳೆಯ ಮತ್ತು ಧರ್ಮನಿಷ್ಠ ವ್ಯಕ್ತಿಯಾಗಿದ್ದರು. ಅವರು ಖಿಲಾಫತ್ ಬಗ್ಗೆ ಆಳವಾದ ಮತ್ತು ಅಪಾರ ಪ್ರೀತಿಯನ್ನು ಹೊಂದಿದ್ದರು. ಡಾ. ಮುಬಷಿರ್ ಮುಮ್ತಾಝ್ ಸಾಹಿಬ್ ಅವರು ಅಮೇರಿಕಾದಿಂದ ಬರೆಯುತ್ತಾರೆ, ಅಮೀಲಾದ ಸದಸ್ಯರಿಗೆ ಬಹಳ ಮೃದುವಾದ ಧ್ವನಿಯಲ್ಲಿ ಸೂಚನೆಗಳನ್ನು ನೀಡುತ್ತಿದ್ದರು. ಅವರು ಪ್ರಸ್ತಾಪವನ್ನು ಒಪ್ಪದಿದ್ದರೆ, ಅವರು ಅದರ ವಿರುದ್ಧ ವಾದವನ್ನು ಮಂಡಿಸುವ ಮೂಲಕ ಅದನ್ನು ವಿವರಿಸುತ್ತಿದ್ದರು. ಅವರು ತನ್ನ ಆದೇಶವನ್ನು ಬಲವಂತದಿಂದ ಕಾರ್ಯರೂಪಕ್ಕೆ ತರುತ್ತಿರಲಿಲ್ಲ. ಗಂಭೀರವಾಗಿ ಮಾತನಾಡುವಾಗಲೂ ನಿಮ್ಮ ಸ್ವರದಲ್ಲಿ ಕಠೋರತನವಿರುತ್ತಿರಲಿಲ್ಲ. ಅವರು ಏನು ವಿವರಿಸಿದರೂ ಅದು ಹೃದಯದ ಆಳಕ್ಕೆ ಹೋಗುತ್ತಿತ್ತು.

ಮಿರ್ಝಾ ಎಹ್ಸಾನ್ ಬರೆಯುತ್ತಾರೆ ವಿನೀತನು ಎಹ್ಸಾನುಲ್ಲಾ ಝುಫರ್ ಸಾಹಿಬ್ ಅವರೊಂದಿಗೆ ದೀರ್ಘಕಾಲ ಕೆಲಸ ಮಾಡುವ ಅವಕಾಶವನ್ನು ಹೊಂದಿದ್ದೆ. ಅವರು ಜಮಾಅತ್‌ನ ಅಧ್ಯಕ್ಷರಾಗಿ ಜಮಾಅತ್‌ನ ಸದಸ್ಯರನ್ನು ಖಿಲಾಫತ್ ಹಾಗೂ ಜಮಾಅತ್‌ನೊಂದಿಗೆ ದೃಢ ಸಂಬಂಧವನ್ನು ಸ್ಥಾಪಿಸುವುದನ್ನು ನೋಡಿದ್ದಾರೆ. ಅವರು ಸರಳ ಮನಸ್ಸಿನ, ಶ್ರಮಶೀಲ, ಶಾಂತಿಪ್ರಿಯ ವ್ಯಕ್ತಿ, ಬಡವರ ಬಗ್ಗೆ ಸಹಾನುಭೂತಿ, ಕೃತಕತೆ ಮತ್ತು ರಚನೆಯಿಂದ ಮುಕ್ತರಾಗಿದ್ದರು, ದುರಾಸೆ ಮತ್ತು ಅಸೂಯೆಯಿಂದ ಮುಕ್ತರಾಗಿದ್ದರು. ಅವರು ತಮ್ಮ ಸಂಪತ್ತನ್ನು ಜಮಾಅತ್ ಮತ್ತು ಬಡವರಿಗಾಗಿ ತೆರೆಯಲಿದ್ದರು. ಅವರು ಪವಿತ್ರ ಖುರ್‌ಆನ್‌ನ ವ್ಯಾಖ್ಯಾನದಲ್ಲಿ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕಗಳ ಅಧ್ಯಯನದಲ್ಲಿ ಮುಳುಗಿದ್ದರು. ಅವರು ಸಂಪೂರ್ಣವಾಗಿ ಅಹಂಕಾರ, ಹೆಮ್ಮೆ ಮತ್ತು ಸ್ವಯಂ ಪ್ರೀತಿಯಿಂದ ದೂರವಿದ್ದರು ಮತ್ತು ಖಲೀಫರ ಸಣ್ಣದೊಂದು ಅಸಮಾಧಾನಕ್ಕೆ ಕಲವಳಗೊಳ್ಳುತ್ತಿದ್ದರು. ಇದನ್ನು ನಾನೇ ಸ್ವತಃ ಅನುಭವಿಸಿದ್ದೇನೆ. ನಾನು ಅವರ ಬಗ್ಗೆ ಯಾವಾಗಲಾದರೂ ಅವರಿಗೆ ಬರೆದಾಗ ಅವರು ಯಾವಾಗಲೂ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು ಮತ್ತು ತಕ್ಷಣವೇ ಕ್ಷಮೆಯಾಚಿಸುತ್ತಿದ್ದರು ಮತ್ತು ವಿಷಯಗಳನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದರು. ಅವರು ಪುಸ್ತಕಗಳನ್ನು ತುಂಬಾ ಇಷ್ಟಪಡುತ್ತಿದ್ದರು. ಅವರ ವೈಯಕ್ತಿಕ ಗ್ರಂಥಾಲಯವು ಇತ್ತು ಅದರಲ್ಲಿ ಅಪರೂಪದ ಪುಸ್ತಕಗಳು ಇದ್ದವು. ಅದನ್ನು ಕಂಡು ಮನುಷ್ಯ ಅಚ್ಚರಿಗೊಳ್ಳುತ್ತಿದ್ದನು. ಅವರಿಗೆ ಪವಿತ್ರ ಖುರ್‌ಆನ್ ಬಗ್ಗೆ ಪ್ರೀತಿ ಮತ್ತು ವಾತ್ಸಲ್ಯವನ್ನು ಹೊಂದಿದ್ದರು. ಅದು ಯಾವುದೇ ಸಭೆಯಾಗಲಿ ಅವರು ಯಾವಾಗಲೂ ಪವಿತ್ರ ಖುರ್‌ಆನ್‌ನ ವಚನಗಳನ್ನು ಧ್ಯಾನಿಸುತ್ತಿದ್ದರು. ಅವರ ಸಭೆಯು ಪ್ರಾಮಾಣಿಕ ಮತ್ತು ಪ್ರೀತಿಯಿಂದ ಎಲ್ಲರನ್ನೂ ತನ್ನ ಕಡೆಗೆ ಆಕರ್ಷಿಸುತ್ತಿತ್ತು. ಅವರು ಅಮೀರ್ ಆಗಿ ಯಾವುದೇ ಪ್ರೋಟೋಕಾಲ್ ಅನ್ನು ಎಂದಿಗೂ ಹೊಂದಿಸಿರಲಿಲ್ಲ. ಅವರು ತುಂಬಾ ಸರಳ ವ್ಯಕ್ತಿಯಾಗಿದ್ದರು.

ಝುಹೀರ್ ಬಾಜ್ವಾ ಸಾಹಿಬ್ ಬರೆಯುತ್ತಾರೆ: ಓರ್ವ ಸ್ನೇಹಿತರು ನನಗೆ ತಿಳಿಸಿದರು ಡಾ.ಎಹ್ಸಾನುಲ್ಲಾ ಸಾಹಿಬ್ ಅವರು ಸದ್ದಿಲ್ಲದೆ ಮಸೀದಿಗೆ ಬಂದು ಯಾರೂ ಇಲ್ಲದ ಸಮಯದಲ್ಲಿ ಒಬ್ಬರೇ ಮಸೀದಿ ಮತ್ತು ಸ್ನಾನಗೃಹವನ್ನು ಸ್ವಚ್ಛಗೊಳಿಸುತ್ತಿದ್ದರು. ಕಾರಣವನ್ನು ಕೇಳಿದಾಗ, ನನ್ನ ಆತ್ಮವನ್ನು ಶುದ್ಧೀಕರಿಸಲು ನನಗೆ ಅವಕಾಶ ಲಭಿಸುತ್ತದೆ ಎಂದು ಹೇಳಿದರು. ಅವರು ತುಂಬಾ ವಿನಮ್ರ ಸ್ವಭಾವಿಯಾಗಿದ್ದರು. ಅದೇ ರೀತಿ ಅವರು ಮುಂದೆ ಬರೆಯುತ್ತಾರೆ: ಡಾ.ಸಾಹಿಬ್ ಅವರ ದೇವರ ಮೇಲಿನ ಪ್ರೀತಿ, ಪ್ರವಾದಿ ಮುಹಮ್ಮದ್(ಸ)ರ ಸ್ಥಾನಮಾನದ ಗೌರವ, ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಪ್ರೀತಿ ಮತ್ತು ಖಲೀಫರೊಂದಿಗೆ ಅವರ ಭಕ್ತಿ ಅನುಕರಣೀಯವಾಗಿತ್ತು. ಪವಿತ್ರ ಖುರ್‌ಆನ್‌ನ ಮೇಲಿನ ಅವರ ಪ್ರೀತಿ ಪದಗಳಿಗೆ ಮೀರಿದ್ದು. ನಾವು ಕಾರಿನಲ್ಲಿ ಒಟ್ಟಿಗೆ ಕುಳಿತಾಗಲೆಲ್ಲಾ ಪವಿತ್ರ ಖುರ್‌ಆನ್‌ನ ಸೀಡಿ ಪ್ಲೇ ಆಗುತ್ತಿತ್ತು ಮತ್ತು ಮನೆಯಲ್ಲಿ ಎಂಟಿಎ ಯಾವಾಗಲೂ ಆನ್ ಆಗಿರುತ್ತಿತ್ತು ಎಂದು ಹೇಳಲಾಗುತ್ತದೆ. ಬೈತ್-ಉರ್-ರಹಮಾನ್ ಬಂದಾಗಲೆಲ್ಲಾ ಅವರು ಯಾವಾಗಲು ಡಂಟಿಎ ಅಥವಾ ಪವಿತ್ರ ಖುರ್‌ಆನ್‌ನ ಪಠಣವನ್ನು ಹಾಕುತ್ತಿದ್ದರು. ಅವರ ಮನೆಯಲ್ಲಿ ಎಲ್ಲೆಡೆ ಪವಿತ್ರ ಖುರ್‌ಆನ್‌ಗಳು ಮತ್ತು ವ್ಯಾಖ್ಯಾನಗಳಿವೆ, ಮತ್ತು ಹೆಚ್ಚಿನ ಸಂಖ್ಯೆಯ ಪುಸ್ತಕಗಳು ಪ್ರತಿಯೊಂದು ಕೊಠಡಿ ಮತ್ತು ಕ್ಲೋಸೆಟ್‌ನಲ್ಲಿವೆ. ಅವುಗಳನ್ನು ನಿಯಮಿತವಾಗಿ ಅಧ್ಯಯನ ಮಾಡುತ್ತಿದ್ದರು.

ಅವರು ರಬ್ವಾದಲ್ಲಿ ಅಧ್ಯಯನ ಮಾಡುತ್ತಿದ್ದಾಗ ಡಾ. ಸಾಹಿಬ್ ಅವರ ತಾಯಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಮತ್ತು ಹಝ್ರತ್ ಮೌಲಾನಾ ಗುಲಾಮ್ ರಸೂಲ್ ಸಾಹಿಬ್ ರಾಜಿಕಿ(ರ) ಅವರನ್ನು ಭೇಟಿಯಾಗಲು ಬಯಸಿದ್ದರು ಮತ್ತು ಪ್ರಾರ್ಥಿಸಲು ವಿನಂತಿಸಿದರು. ಡಾ॥ ಸಾಹಿಬ್ ಹೇಳುತ್ತಾರೆ: ನಾನು ಸಾಧ್ಯವಾದಷ್ಟು ಅದಕ್ಕಾಗಿ ಪ್ರಯತ್ನಿಸುತ್ತಿದ್ದೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಇತರ ತರಬೇತಿಯಲ್ಲಿ ನನ್ನ ಯಶಸ್ಸಿಗೆ ಈ ಇಬ್ಬರು ಹಿರಿಯರೊಂದಿಗೆ ಸಾಕಷ್ಟು ಸಂಬಂಧವಿದೆ. ಅವರು ಎಲ್ಲರನ್ನೂ ಪ್ರೀತಿಸುತ್ತಿದ್ದರು ಆದರೆ ಬಡ ಅಹ್ಮದೀಯರ ಬಗ್ಗೆ ಅವರ ದೃಷ್ಟಿಯಲ್ಲಿ ನಾನು ಕಂಡ ವಿಶೇಷ ಪ್ರೀತಿ ಪದಗಳಿಗೆ ಮೀರಿದ್ದು. ಅವರು ಯಾರನ್ನೂ ಕೆಟ್ಟದಾಗಿ ಯೋಚಿಸಲು ಸಾಧ್ಯವಿಲ್ಲ, ಆದರೆ ಸಮೃದ್ಧ ಅಹ್ಮದಿ ಜಮಾತ್ಗಾಗಿ ತ್ಯಾಗಕ್ಕೆ ಮುಂದಾಗದ ವ್ಯಕ್ತಿಯವ ಬಗ್ಗೆ ಅವರ ಮನಸ್ಸಿನಲ್ಲಿ ಸಂಕಟ ಇರುತ್ತಿತ್ತು ಅದನ್ನು ಅವರು ವ್ಯಕ್ತಪಡಿಸುತ್ತಿದ್ದರು. ಪ್ರತಿ ಅಹ್ಮದಿಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ನಿಜವಾದ ಸ್ಥಾನವನ್ನು ಅರ್ಥಮಾಡಿಕೊಳ್ಳಬೇಕು ಎಂಬ ಬಲವಾದ ಆಸೆಯನ್ನು ಅವರು ಹೊಂದಿದ್ದರು. ಹಝ್ರತ್ ಮಸೀಹ್ ಮೌಊದ್(ಅ)ರ ಸಂದೇಶವನ್ನು ನಾವು ಅರ್ಥಮಾಡಿಕೊಳ್ಳಲು, ಅಳವಡಿಸಿಕೊಳ್ಳಲು ಮತ್ತು ಹರಡಲು ಅವರು ಬಯಸಿದ್ದರು ಮತ್ತು ಇದಕ್ಕಾಗಿ ಅವರು ಹೊಸ ಮಾರ್ಗಗಳ ಬಗ್ಗೆ ಯೋಚಿಸುತ್ತಿದ್ದರು. ಅವರು ಕೆಲವೊಮ್ಮೆ ನನಗೆ ಬರೆಯುತ್ತಿದ್ದರು. ಮಸೀದಿಗಳನ್ನು ಕಟ್ಟುವುದರಲ್ಲಿಯೂ ಅವರಿಗೆ ಬಹಳ ಆಸಕ್ತಿ ಇತ್ತು. ಅವರ ಕಾಲದಲ್ಲಿ ಅನೇಕ ಮಸೀದಿಗಳನ್ನು ನಿರ್ಮಿಸಲಾಯಿತು. ಪ್ರಾರ್ಥನೆಯಲ್ಲಿ ಅವರ ನಂಬಿಕೆ ಬಹಳ ದೃಢವಾಗಿತ್ತು. ಒಮ್ಮೆ ಅಮಿಲಾ (ಕಾರ್ಯ ಸಮಿತಿಯ) ಮೀಟಿಂಗ್‌ನಲ್ಲಿ ಯಾರೋ ಒಬ್ಬರು ಪ್ರಾರ್ಥನೆಯ ಹಿರಿಮೆಗೆ ಕಡಿವಾಣ ಹಾಕಿದಂತಿತ್ತು. ಈ ಸಂದರ್ಭದಲ್ಲಿ ಅವರಷ್ಟು ಕೋಪಗೊಂಡಿದ್ದ ಅವರನ್ನು ನಾನು ಅಮಿಲದಲ್ಲಿ ನೋಡಿಲ್ಲ ಎಂದು ಹೇಳಲಾಗುತ್ತದೆ.

ಅತ್ಯಂತ ಸರಳ ಜೀವನ ನಡೆಸುತ್ತಿದ್ದರು. ಯಾವುದಾದರೂ ಹವ್ಯಾಸವಿದ್ದರೆ ಅದು ಮಸೀದಿ ಕಟ್ಟುವ ಹವ್ಯಾಸವಾಗಿತ್ತು. ಎಲ್ಲರೂ ಹೇಳುವ ಎಲ್ಲವನ್ನೂ ಅವರು ನಂಬಿದ್ದರು, ಆದರೆ ಅವರು ಮಸೀದಿಯನ್ನು ನಿರ್ಮಿಸದ ವಿಷಯವನ್ನು ತುಂಬಾ ಕೆಟ್ಟದಾಗಿ ಪರಿಗಣಿಸುತ್ತಿದ್ದರು. ಅವರು ಆರೋಗ್ಯವಾಗಿರುವವರೆಗೂ, ಅವರು ಪ್ರತಿ ಗುರುವಾರ

ವಿಲ್ಲಿಂಗ್‌ಬೊರೊದಲ್ಲಿರುವ ಬೈತುನ್ನಸರ್ ಮಸೀದಿಯನ್ನು ಸ್ವಚ್ಛಗೊಳಿಸುತ್ತಿದ್ದರು. ಆರ್ಥಿಕ ತ್ಯಾಗದಲ್ಲಿ ಯಾವಾಗಲೂ ಸಕ್ರಿಯವಾಗಿ ಭಾಗವಹಿಸುವ ಅವಕಾಶವನ್ನು ಸರ್ವಶಕ್ತನಾದ ಅಲ್ಲಾಹನು ಅವರಿಗೆ ನೀಡಿದನು.

ಪ್ರಸ್ತುತ ಅಹ್ಮದಿಯಾ ಜಮಾತ್ ಅಮೇರಿಕಾದ ಅಮೀರ್ ಆಗಿರುವ ಮಿರ್ಝಾ ಮುಗ್ಫೂರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಡಾ. ಎಹ್ಸಾನುಲ್ಲಾ ಝುಫರ್ ಸಾಹಿಬ್ ಅವರು ಬಹಳ ಹಿಂದೆಯೇ ನಾಯಿಬ್ ಅಮೀರ್ ಆಗಿ ಸೇವೆ ಸಲ್ಲಿಸಲು ಅಲ್ಲಾಹನಿಂದ ಅನುಗ್ರಹಿಸಲ್ಪಟ್ಟರು ಮತ್ತು ನಂತರ ಅಮೇರಿಕಾದ ಅಹ್ಮದಿಯಾ ಜಮಾತ್‌ನ ಅಮೀರ್ ಆಗಿಯೂ ಸೇವೆ ಸಲ್ಲಿಸಿದರು ಅವರು ಅಮೀರ್ ಆಗಿದ್ದಾಗ ನಾನು ಅಮೆರಿಕಾಗೆ ಮೂರು ಪ್ರವಾಸಗಳನ್ನು ಕೈಗೊಂಡಿದ್ದೆ ಮತ್ತು ಅವರು ಬಹಳ ಉತ್ತಮ ರೀತಿಯಲ್ಲಿ ನನ್ನ ಪ್ರವಾಸಗಳಿಗೆ ಅವಕಾಶ ಕಲ್ಪಿಸಿದರು ಮತ್ತು ವ್ಯವಸ್ಥೆ ಮಾಡಿದರು. ಅನೇಕ ವರ್ಷಗಳಿಂದ ಅನಾರೋಗ್ಯದ ಕಾರಣ ಅವರ ಚಲನಶೀಲತೆ ಸೀಮಿತವಾಗಿತ್ತು ಎಂದು ಹೇಳಲಾಗುತ್ತದೆ, ಆದರೆ ಅವರು ಅಮೀರ್‌ನ ಹೊಣೆಗಾರಿಕೆಗಳನ್ನು ಲವಲವಿಕೆಯಿಂದ ನಿರ್ವಹಿಸುತ್ತಿದ್ದರು. ಅವರ ಸಂಭಾಷಣೆಯಲ್ಲಿ, ಹಝ್ರತ್ ಮಸೀಹ್ ಮೌಊದ್(ಅ)ರ ಬಗ್ಗೆ ಆಗಾಗ್ಗೆ ಚರ್ಚಿಸಲಾಗುತ್ತಿತ್ತು. ಅವರು ಮಾತನಾಡುವಾಗ, ಅವರು ಹಝ್ರತ್ ಮಸೀಹ್ ಮೌಊದ್(ಅ) ರ ಬಗ್ಗೆ ಮಾತನಾಡುತ್ತಿದ್ದರು. ನಿಮ್ಮ ಪುಸ್ತಕಗಳ ಉಲ್ಲೇಖಗಳನ್ನು ಬಳಸುತ್ತಿದ್ದರು. ಮತ್ತು ಹುಝೂರ್ ಅಲೈಹಿಸ್ಸಲಾಮ್ ಅವರೊಂದಿಗೆ ವಿಶೇಷ ಸಂಬಂಧವನ್ನು ವ್ಯಕ್ತಪಡಿಸುತ್ತಿದ್ದರು. ಖಿಲಾಫತ್‌ನೊಂದಿಗೆ ಬಹಳ ಆಳವಾದ ಮತ್ತು ವಿಧೇಯತೆಯ ಸಂಬಂಧವಿತ್ತು, ಮತ್ತು ನಂತರ ಅಮೇರಿಕಾದ ಪ್ರಸ್ತುತ ಅಮೀರ್ ಸಾಹಿಬ್ ಬರೆಯುತ್ತಾರೆ: ನನಗೆ ಬರೆಯುತ್ತಾರೆ, ನಿಮ್ಮಿಂದ ಬಂದ ಎಲ್ಲಾ ಸಲಹೆ ಸೂಚನೆಗಳನ್ನು ತಕ್ಷಣ ಜಮಾತ್‌ನ ಸದಸ್ಯರಿಗೆ ತಲುಪಿಸಲು ಪ್ರಯತ್ನಿಸುತ್ತಿದ್ದರು. ಆದಾಗ್ಯೂ, ನಾನು ಹೇಳಿದಂತೆ, ಖಲೀಫತ್‌ನೊಂದಿಗೆ ವಿಧೇಯತೆ ಅವರಲ್ಲಿ ಅಪ್ರತಿಮವಾಗಿತ್ತು ಎಂದು ನಾನು ಸಹ ಕಂಡಿದ್ದೇನೆ. ಸ್ವಂತ ಅಭಿಪ್ರಾಯವನ್ನು ಬಿಟ್ಟು ಬಹಳ ಲವಲವಿಕೆಯಿಂದ ಬಿಡುತ್ತಿದ್ದರು.

ಅಲ್ಲಾಹನು ಅವರ ಮೇಲೆ ಕರುಣೆ ಮತ್ತು ಕ್ಷಮೆಯನ್ನು ನೀಡಲಿ. ಪದವಿಗಳನ್ನು ವರ್ಧಿಸಲಿ. ಸರ್ವಶಕ್ತನಾದ ಅಲ್ಲಾಹನು ಅವರ ಪುತ್ರಿಯರನ್ನು ತನ್ನ ಸಂರಕ್ಷಣೆಯಲ್ಲಿರಿಸಲಿ ಮತ್ತು ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸುವ ಸಾಮರ್ಥ್ಯವನ್ನು ನೀಡಲಿ.

(ಅಲ್-ಫಝಲ್ ಇಂಟರ್‌ನ್ಯಾಶನಲ್ ಡೈಲಿ, ಮೇ 10, 2024, ಪುಟ 2-6)

...*...*...*...

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮನುಷ್ಯರ ಮಟ್ಟಿಗೆ ಸೀಮಿತವಾಗಿರುತ್ತದೆ. ಅಷ್ಟಕ್ಕೆ ತೃಪ್ತಿಪಟ್ಟಿರುತ್ತಾನೆ. ಆದರೆ ಜ್ಞಾನಿಯೊಬ್ಬನ ದೃಷ್ಟಿಯು ಮೇಲ್ಪಟ್ಟದ್ದು ಹಾಗೂ ಉನ್ನತಮಟ್ಟದ್ದಾಗಿರುತ್ತದೆ. ಅವರು ಗ್ರಹಿಸಿಕೊಂಡಿರುತ್ತಾರೆ. ಅಲ್ಲಾಹನ ಮುಂದೆ ಅವನ ದಾಸನ ಯೋಗ್ಯತೆಯಾದರೇನು. ಏಕೆಂದರೆ ಅವನು ದಾಸನಷ್ಟೇ ಅಲ್ಲವೇ. ಅವನ ಜೀವನ ಸಹ ಅಲ್ಲಾಹನೇ ನೀಡಿರುವಂತಹದಲ್ಲವೇ? ಮಾರ್ಗದರ್ಶನ ಸಹ ಅವನೇ ನೀಡಿರುವನು. ಕವಿ ಗಾಲಿಬ್ ಎಷ್ಟು ಉತ್ತಮವಾಗಿ ಹೇಳಿದ್ದಾನೆ.

ಜಾನ್ ದೀ ದೀಹುಮೀ ಉಸೀಕಿ ಥೀ
ಹಖ್ ತೋ ಏ ಹೈ ಕೇ ಹಖ್ ಅದಾ ನ ಹುಆ !!
ತ್ಯಾಗ ಮಾಡಿರಬಹುದು. ಆದರೆ ಅದು ಅವನೇ ನೀಡಿದ್ದಲ್ಲವೆ
ಹೇಳಬೇಕಾದರೆ ಅವನ ಹಕ್ಕು ತೀರಿಸಲು ಸಾಧ್ಯವಾಗಲಿಲ್ಲ

ಅಂದ ಹಾಗೆ ಪ್ರವಾದಿಯು ಜ್ಞಾನ ಹೊಂದಿದವರಾಗಿರುತ್ತಾರೆ. ಅವರು ತಮ್ಮನ್ನು ಅರಿತುಕೊಂಡಿರುವವರಾಗಿರುತ್ತಾರೆ. ಏನೆಲ್ಲಾ ನಾನು ಮಾಡುತ್ತಿದ್ದೇನೆ. ಅದು ನಾನಲ್ಲ, ಅಲ್ಲಾಹನೇ ಮಾಡುತ್ತಿರುವನು ಎಂಬ ಅರಿವಿರುತ್ತದೆ. ಆದುದರಿಂದ ಅವರು ಪ್ರಾರ್ಥಿಸುತ್ತಾರೆ ಓ ಅಲ್ಲಾಹ್ ನಮ್ಮ ಅಸ್ತಿತ್ವವನ್ನು ಆದಷ್ಟು ಗೌಪ್ಯವಾಗಿಡು. ಮತ್ತು ನಿನ್ನ ಅಸ್ತಿತ್ವವನ್ನು ಹೆಚ್ಚೆಚ್ಚು ಪ್ರಕಟಪಡಿಸು. ಅಂದರೆ **"ಇಗ್‌ಫಿರ್‌ಲಿ"** ಈ ನೆಲೆಯಲ್ಲಿ ಅರ್ಥವಾಗುವುದು. ಓ ಅಲ್ಲಾಹ್ ನಿನಗೆ ನನ್ನ ಪ್ರೀತಿಯ ಕಾರಣ ನಿನ್ನ ಅಭಯ ನನ್ನ ಮೇಲಿರಲಿ. ಅಂದರೆ ನನ್ನ ಅಸ್ತಿತ್ವ ಅಳಿಸಿ, ನಿನ್ನ ಅಸ್ತಿತ್ವ ನನ್ನ ಮೂಲಕ ಪ್ರಕಟಗೊಳ್ಳಲಿ, ಪರಿಣಾಮವಾಗಿ ಅಲ್ಲಾಹನ ಅಸ್ತಿತ್ವ ಎಷ್ಟರಮಟ್ಟಿಗೆ ದಾಸನ ಮೂಲಕ ಪ್ರಕಟಗೊಳ್ಳುವುದೋ ಅಷ್ಟೇ ಸತ್ಕಾರ್ಯಗಳಲ್ಲಿ ಯಶಸ್ಸು ದೊರೆಯುವಂತಾಗುತ್ತದೆ.

ಹೌದು ಅನ್ಯರಿಗಾಗಿ ಈ ಪದ ಬಳಕೆಯಾದರೆ ಅದರ ತಕ್ಕಂತೆ ಅದರ ಅರ್ಥವಿರುತ್ತದೆ. ಒಬ್ಬ ಉನ್ನತ ದರ್ಜೆಯ ಸತ್ಯವಿಶ್ವಾಸಿಯು ಈ ಪದ ಬಳಕೆ ಮಾಡಿದರೆ ಅದರ ಅರ್ಥ. ಓ ಅಲ್ಲಾಹನೇ ನಿನ್ನ ಸಾನಿಧ್ಯ ಪಡೆಯುವಲ್ಲಿ ಉಂಟಾಗುವ ಕೊರತೆಯಿಂದ ನಮ್ಮನ್ನು ರಕ್ಷಿಸು ಎಂದಾಗುತ್ತದೆ. ಮಧ್ಯಮ ದರ್ಜೆಯ ಮೋಮಿನ್ (ಸತ್ಯವಿಶ್ವಾಸಿ) ಈ ಪದ ಬಳಕೆ ಮಾಡುವಾಗ ಅದರ ಅರ್ಥ. ನನ್ನ ತಪ್ಪುಗಳನ್ನು ಮರೆಮಾಚಿ ನನಗೆ ಉನ್ನತಮಯ ಪ್ರಗತಿಗಳನ್ನು ದಯಪಾಲಿಸು ಎಂದಾಗುತ್ತದೆ. ಅಂತೆಯೇ ಸಾಮಾನ್ಯ ಮುಮಿನ್ (ಸತ್ಯವಿಶ್ವಾಸಿ) ಈ ಪದ ಬಳಕೆ ಮಾಡಿದರೆ ಅದಕ್ಕೆ ಅರ್ಥ: ವಿಶ್ವಾಸದ ಮೇಲೆ ನನಗೆ ಸ್ಥಿರತೆ ನೀಡು. ನನ್ನ ಪಾಪಗಳು ನನ್ನನ್ನು ಮುಳುಗಿಸದಿರಲಿ. ಒಬ್ಬ ಸತ್ಯದಾರಿಯನ್ನು ಬಯಸುವವನು ಈ ಪದ ಬಳಕೆ ಮಾಡಿದರೆ ಅದರ ಅರ್ಥ. ಅವನ ಪಾಪಗಳು ಅವನನ್ನು ಸನ್ಮಾರ್ಗದಿಂದ ವಂಚಿತನನ್ನಾಗಿ ಮಾಡದಿರಲಿ. ಆದುದರಿಂದ ನನ್ನ ಪಾಪಗಳನ್ನು ಕ್ಷಮಿಸು. ಈ ಪದದ ಬಳಕೆ ವಿಭಿನ್ನ ಸಂದರ್ಭಗಳಲ್ಲಿ ಆಗುವ ರೀತಿ 'ಜಬ್ಬಾರ್" ಪದದಂತಿರುವುದು. "ಜಬ್ಬಾರ್" ಪದವು ಅಲ್ಲಾಹನಿಗೋಸ್ಕರ ಬರುವುದಾದರೆ ಅದರ ಅರ್ಥ "ಉದ್ಧಾರಕ" ಎಂದಾಗುತ್ತದೆ. ಅದೇ ಪದ ದಾಸನಿಗಾಗಿ ಬರುವುದಾದರೆ ಅದರ ಅರ್ಥ "ಕಾನೂನು ವಂಚಕ" "ವಿದ್ರೋಹಿ" ಎಂದಾಗುತ್ತದೆ. ನೆನಪಿಡಬೇಕು. ಅಲ್ಲಾಹನು ತನ್ನ ಪ್ರವಾದಿಗಳ ಕುರಿತು ಹೇಳುತ್ತಾನೆ. ಅಲ್ಲಾಹ್ ಹೇಗೆ ಸಧ್ಯವಾದೀತು ಲೋಕದಿಂದ ಬೇರ್ಪಡಿಸಿ ಅಲ್ಲಾಹನು ತನ್ನ ಸಾಮಿಪ್ಯ ಒದಗಿಸಿಕೊಟ್ಟಾಗ ಅವರ ಬಳಿ ಶೈತಾನನು ಹೇಗೆ ತಾನೇ ಬರುವುದು. ಶೈತಾನನಂತೂ ಅಲ್ಲಾಹನ ನಾಮದಿಂದಲೇ ದೂರ ಓಡಿ ಹೋಗುತ್ತಾನೆ. ಅದೇ ರೀತಿ ಇನ್ನೊಂದೆಡೆ ಅಲ್ಲಾಹನು ನುಡಿದನು. **ಇನ್ನ ಇಬಾದಿ ಲೈಸಲಕ ಅಲೈಹಿಂ ಸುಲ್ತಾನ್** ನನ್ನ ದಾಸರ ಮೇಲೆ ನಿಶ್ಚಯವಾಗಿಯೂ ನಿನ್ನ ಪ್ರಭಾವ ಬೀರದು. ಅಂದ ಹಾಗೆ ಕನಿಷ್ಠ ದರ್ಜೆಯ ದಾಸನಿಗಾಗಿ ಈ ಕಾಯಿದೆ ಕಾನೂನು ಇರುವಾಗ, ಪ್ರವಾದಿಗಳಂತೂ ಅಲ್ಲಾಹನ ವಿಶೇಷ ರಕ್ಷಣೆಯಲಿರುವವರು ಅವರ ಬಳಿ ಶೈತಾನನು ನುಸುಳಿ ಬರಲು ಹೇಗೆ ಸಾಧ್ಯ.

**(ತಫ್ಸೀರ್ ಕಬೀರ್, ಸಂಪುಟ-3, ಪುಟ-489, ಮುದ್ರಣ 2010 ಖಾದಿಯಾನ್)**

**ಹಝ್ರತ್ ಖಲೀಫತುಲ್ ಮಸೀಹ್ ಅಲ್-**
**S Á« Ä ïgÁ(ಅತಬಿಅ) ಆರೋಗ್ಯಕ್ಕಾಗಿ**

## ದುಆ ಮಾಡಲು ಮನವಿ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್(ಅತಬಿಅ) 03 ಮೇ 2024ರ ಖುತ್‌ಬ ಜುಮುಅದ ಕೊನೆಯ ಭಾಗದಲ್ಲಿ ಅವರ ಆರೋಗ್ಯದ ಕುರಿತು ದುಆಗಾಗಿ ಮನವಿ ಮಾಡುತ್ತಾ ಹೇಳಿದರು:

ಇಂದು ನಾನು ಹೇಳಲು ಬಯಸುವ ಎರಡನೇ ಪ್ರಾರ್ಥನೆ ನನಗಾಗಿ ಆಗಿದೆ. ದೀರ್ಘ ಕಾಲದಿಂದ ನನಗೆ ಹೃದಯದ ವಾಲ್‌ವಿನ (valve) ಸಮಸ್ಯೆ ಇತ್ತು. ವೈದ್ಯರು ಚಿಕಿತ್ಸೆಗಾಗಿ ಹೇಳುತ್ತಿದ್ದರು, ಆದರೆ ನಾನು ಅದನ್ನು ಮುಂದೂಡುತ್ತಿದ್ದೆ. ಇನ್ನು ಕಾಯುವುದು ಸೂಕ್ತವಲ್ಲ ಎನ್ನುವಂತಹ ಹಂತ ಬಂದಿರುವುದರಿಂದ ಅವರ ಕೋರಿಕೆಯ ಮೇರೆಗೆ ಕೆಲವು ದಿನಗಳ ಹಿಂದೆ ವಾಲ್ವ್ (valve) ಬದಲಾಯಿಸುವ ಪ್ರಕ್ರಿಯೆ ನಡೆದಿದೆ. ವೈದ್ಯರ ಸೂಚನೆಯಂತೆ ನಾನು ಕೆಲವು ದಿನಗಳ ವರೆಗೆ ಮಸೀದಿಗೆ ಬರಲು ಸಾಧ್ಯವಾಗಿರಲಿಲ್ಲ. ನಾನೀಗ ಗುಣಮುಖನಾಗಿದ್ದೇನೆ. ಅಲ್‌ಹಮ್ದುಲಿಲ್ಲಾಹ್. ಅಲ್ಲಾಹನ ಕೃಪೆಯಿಂದ ಈಗ ಆಗಬೇಕಿದ್ದ ವೈದ್ಯಕೀಯ ಚಿಕಿತ್ಸೆ ಯಶಸ್ವಿಯಾಗಿದೆ ಎನ್ನುತ್ತಾರೆ ವೈದ್ಯರು. ಅಲ್ಲಾಹನು ದಯಪಾಲಿಸುವಷ್ಟು ಜೀವನ ಸಕ್ರಿಯ ಜೀವನವಾಗಿರಲಿ ಎಂದು ಪ್ರಾರ್ಥಿಸಿರಿ. ಆಮೀನ್.

(ನಮ್ಮ ಪ್ರೀತಿಯ ಇಮಾಮ್ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಎಂದು ನಾವು ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇವೆ.)

اَللّٰهُمَّ اَيِّدْ اِمَامَنَا بِرُوْحِ الْقُدُسِ وَكُنْ مَعَهٗ حَيْثُ مَا كَانَ وَانْصُرْهُ نَصْرًا عَزِيْزًا

***********

**MUSLIM TELEVISION AHMADIYYA INTERNATIONAL**
**www.mta.tv**
**Love for All, Hatred for None**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ಈಡೇರಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಉಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಶವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)

"ಉಪವಾಸ ಮಾಡಿರಿ, ಆರೋಗ್ಯ ಪಡೆಯಿರಿ."
"ಜನರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸಲಾರನು."
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

## ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ.

***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು **"ಹಕಮ್"** ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು **"ಮುಹೈಮಿನ್"** ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ.

**(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)**

## *ಕವನ "ಮಹ್‌ಮೂದ್ ಕೀ ಆಮೀನ್"*

ಹಮ್‌ದೋ ಸನಾ ಉಸೀ ಕೋ ಜೋ ಝಾತ್ ಜಾವಿದಾನೀ
ಹಮ್‌ಸರ್ ನಹೀ ಹೇ ಉಸ್‌ಕಾ ಕೋಯೀ ನ ಕೋಯೀ ಸಾನೀ
**ಅರ್ಥ**: ಎಲ್ಲ ಸ್ತುತಿಗಳು ಶಾಶ್ವತವಾದ ಅಸ್ತಿತ್ವವುಳ್ಳವನಿಗೆ ಸಲ್ಲುತ್ತವೆ.
ಅವನಿಗೆ ಸಮಾನರು ಯಾರೂ ಇಲ್ಲ; ಸರಿಸಾಟಿಗಳೂ ಇಲ್ಲ.

ಬಾಖೀ ವಹೀ ಹಮೇಶ ಗೈರ್ ಉಸ್‌ಕೇ ಸಬ್ ಹ್ಯಂ ಫಾನೀ
ಗೈರೋಂ ಸೇ ದಿಲ್ ಲಗಾನ ಝೂಟೀ ಹೇ ಸಬ್ ಕಹಾನೀ
**ಅರ್ಥ**: ಅವನೇ ಸದಾಕಾಲ ನಾಶವಾಗದೆ ಉಳಿಯುವವನು.
ಅವನ ಹೊರತು ಎಲ್ಲರೂ ನಶ್ವರರು.
ಅನ್ಯರೊಂದಿಗೆ ಹೃದಯಬಂಧ ಸ್ಥಾಪಿಸುವುದು
ಸುಳ್ಳು ಕತೆಯ ಹಾಗೆ ನಿರರ್ಥಕ.

ಸಬ್ ಗೈರ್ ಹ್ಯಂ ವಹೀ ಹೇ ಇಕ್ ದಿಲ್ ಕಾ ಯಾರೆ ಜಾನೀ
ದಿಲ್ ಮೇ ಮೆರೆ ಯಹೀ ಹೇ ಸುಬ್‌ಹಾನ ಮೈಯ್ಯರಾನೀ
**ಅರ್ಥ**: ಅವನೊಬ್ಬನೇ ನನ್ನ ಪ್ರಾಣಮಿತ್ರ.
ಉಳಿದವರೆಲ್ಲರೂ ನನಗೆ ಅನ್ಯರು
ನನ್ನ ಹೃದಯದಲ್ಲಿ ಇದು ಮಾತ್ರವಿದೆ.
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

ಸಬ್ ಕಾ ವಹೀ ಸಹಾರಾ ರಹ್ಮತ್ ಹೇ ಆಶ್‌ಕಾರಾ
ಹಮ್ ಕೋ ವಹೀ ಪ್ಯಾರಾ ದಿಲ್‌ಬರ್ ವಹೀ ಹಮಾರಾ
**ಅರ್ಥ**: ಎಲ್ಲರಿಗೂ ಅವನೇ ಆಶ್ರಯದಾತನಾಗಿರುವನು –
ಅವನ ಕೃಪೆ ಬಹಿರಂಗವಾಗಿದೆ.
ಅವನು ನಮಗೆ ಅತ್ಯಂತ ಪ್ರಿಯಕರ,
ನಮ್ಮ ಹೃದಯಗಳಲ್ಲಿ ಅವನೇ ಇರುವನು.

ಉಸ್‌ಬಿನ್ ನಹೀ ಗುಝಾರಾ, ಗೈರ್ ಉಸ್‌ಕೇ ಝೂಟ್ ಸಾರಾ
ಯೇಃ ರೋಝ್ ಕರ್ ಮುಬಾರಕ್ ಸುಬ್‌ಹಾನ ಮಯ್ಯರಾನೀ
**ಅರ್ಥ**: ಅವನ ಹೊರತು ನಾವು ಜೀವಿಸಲಾರೆವು;
ಅವನ ಹೊರತು ಎಲ್ಲವೂ ಮಿಥ್ಯ
ಈ ದಿನವನ್ನು ಅನುಗ್ರಹೀತವನ್ನಾಗಿ ಮಾಡು –
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

**ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.**
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 30 May 2024, Issue No. 22

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ–18ರ ಉಳಿದ ಭಾಗ ಮುಂದುವರಿಸಲಾಗಿದೆ)*

ಹುಝೂರೆ ಅನ್ವರ್(ಅತಬಿಅ) ಹಾಲ್‌ನಿಂದ ಹೊರಗೆ ಆಗಮಿಸಿದ ನಂತರ Forstadt ನಗರದ ಮೇಯರ್ ಆದ Mr. Herbert Unger ಹುಝೂರೆ ಅನ್ವರ್(ಅತಬಿಅ)ರ ಜೊತೆ ಭೇಟಿಯಾಗುವ ಭಾಗ್ಯ ಪಡೆದರು. ಹುಝೂರೆ ಅನ್ವರ್(ಅತಬಿಅ) ಪ್ರೀತಿಯಿಂದ ಅವರೊಡನೆ ಮಾತನಾಡಿದರು.

ನಂತರ ಹುಝೂರೆ ಅನ್ವರ್(ಅತಬಿಅ) ಪ್ರೀತಿಯಿಂದ ಮಕ್ಕಳಿಗೆ ಚಾಕ್ಲೇಟ್ ನೀಡಿದರು. ಅವರು ಮೊದಲೇ ಸಾಲಾಗಿ ನಿಂತುಕೊಂಡಿದ್ದರು.

ನಂತರ ಹುಝೂರೆ ಅನ್ವರ್(ಅತಬಿಅ) ಪ್ರೀತಿಪೂರ್ವಕವಾಗಿ ಸಂಘಟನಾ ಮುರಬ್ಬಿಯುರಾದ ತಹಸೀನ್ ರಶೀದ್ ಸಾಹಿಬ್ ಅವರ ಮನೆಗೆ ಆಗಮಿಸಿದರು. ಅವರು ಮಸೀದಿಗೆ ಲಗತ್ತಿಸಿದ ಮಿಶನ್ ಹೌಸ್‌ನಲ್ಲೇ ವಸತಿ ಮಾಡಿದ್ದಾರೆ.

ನಂತರ Flostadt ಜಮಾಅತ್‌ನ ಮಜ್ಲಿಸ್ ಆಮಿಲ ಸದಸ್ಯರು ಹಾಗೂ ಮಸೀದಿ ನಿರ್ಮಾಣ ನಡುವೆ ವಖಾರೆ ಅಮಲ್ ಮಾಡಿದ ಬಾಂಧವರು ಸಾಮೂಹಿಕವಾಗಿ ಹುಝೂರೆ ಅನ್ವರ್(ಅತಬಿಅ)ರ ಜೊತೆ ಫೋಟೋ ತೆಗೆಸಿಕೊಳ್ಳುವ ಭಾಗ್ಯ ಪಡೆದರು.

ಮಸ್ಜಿದ್ ಮುಬಾರಕ್ ಉದ್ಘಾಟನಾ ನಿಮಿತ್ತ ಒಂದು ಸಮಾರಭದ ನಿಯೋಜನೆ ಮಸೀದಿಯಿಂದ ಕೆಲವೇ ಕಿ.ಮೀ ದೂರದಲ್ಲಿರುವ ಒಂದು ಹಾಲ್ "Analia Ballasadą ನಲ್ಲಿ ಮಾಡಲಾಗಿತ್ತು. ಈ ಸಭಾಂಗಣವು ವಿವಿಧ ಸಮಾರಂಭಗಳಿಗೆ, ವಸ್ತು ಪ್ರದರ್ಶನಗಳಿಗೆ ಮತ್ತು ಸಮಾವೇಶಗಳಿಗಾಗಿ ಬಳಸಲಾಗುತ್ತದೆ. ಹುಝೂರ್ ಅನ್ವರ್ (ಅಬಿಅ) ಮಸೀದಿಯಿಂದ 06 ಗಂಟೆ 5 ನಿಮಿಷಕ್ಕೆ ಹೊರಡಿ 06 ಗಂಟೆ 18 ನಿಮಿಷಕ್ಕೆ ಈ ಸಭಾಂಗಣಕ್ಕೆ ಪ್ರವೇಶಿಸಿದರು.

ಹುಝೂರೆ ಅನ್ವರ್(ಅತಬಿಅ) ಬರುವುದಕ್ಕಿಂತ ಮುಂಚೆ ಅತಿಥಿಗಳು ತಮ್ಮ ಹಾಸ ತುಮ ಹಾಸನಗಳಲ್ಲಿ ಆಸೀನರಾಗಿದ್ದರು. ಇಂದಿನ ಈ ಸಮಾರಂಭದಲ್ಲಿ 114 ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ರಾಜ್ಯ ಸಂಸದ್ ಸದಸ್ಯರು, ಎರಡು ನಗರಗಳ ಮೈರೆಗಳು, ಸ್ಥಳೀಯ ಹಾಗೂ ರಾಜ್ಯ ರಾಜಕಾರಣಗಳು, ಪೋಲೀಸರು, ವಕೀಲರು ಮತ್ತು ಜೀವನಕ್ಕೆ ಸಂಬಂಧಿಸಿದ ವಿವಿಧ ವಿಭಾಗಗಳ ಜನರು ಶಾಮೀಲಾಗಿದ್ದರು.

06 ಗಂಟೆ 22 ನಿಮಿಷಕ್ಕೆ ಸಮಾರಂಭದ ಆರಂಭ ಪವಿತ್ರ ಖುರ್‌ಆನ್ ಪಠಣದಿಂದ ಆಯಿತು. ಅದನ್ನು ಮಾನ್ಯ ಹಾಫಿಝ್ ತಾಹಿರ್ ಅಹ್ಮದ್ ಸಾಹಿಬ್ ನೆರವೇರಿಸಿಕೊಟ್ಟರು. ಮತ್ತು ಅದರ ಅನುವಾದ ಜರ್ಮನ್ ಭಾಷೆಯಲ್ಲಿ ಮಾನ್ಯ ಫರೀದ್ ಸಮೀ ಸಾಹೇಬ್ ಪ್ರಸ್ತುತಪಡಿಸಿದರು.

ಅನಂತರ ಮಾನ್ಯ ಅಮೀರ್ ಸಾಹೇಬ್ ಜರ್ಮನಿ ಅಬ್ದುಲ್ಲಾ ವಾಗಸ್ ಹೌಸ್ ಸಾಹೇಬರು ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅಮೀರ್ ಸಾಹೇಬರು ಈ ನಗರದ ಪರಿಚಯ ನೀಡುತ್ತಾ ತಿಳಿಸಿದರು. (Western) ಮಧ್ಯ ಭಾಗದಲ್ಲಿರುವ (Forstatt) ಸುಂದರ ನಗರದಲ್ಲಿದೆ. ಈ ನಗರದ ಜನಸಂಖ್ಯೆ 10,000 ರಷ್ಟು ಇದೆ. ಈ ನಗರದ ಇತಿಹಾಸ ಎರಡು ಸಾವಿರ ವರ್ಷಕ್ಕಿಂತ ಹೆಚ್ಚು ಹಳೆಯದಾಗಿದೆ. ಈ ನಗರದಲ್ಲಿ ಜಮಾಅತಿನ ಸಂಖ್ಯೆ 160 ರಷ್ಟು ಇದೆ. ಈ ಮಸೀದಿಯ ನಿರ್ಮಾಣಕ್ಕಿಂತ ಮುಂಚೆ ನೆರೆಯ ಜಮಾಅತಿನ ಬಾಂಧವರು ಇಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

ಮಸೀದಿಯ ಸದರಿ ಪ್ಲಾಟಿನ ವಿಸ್ತಿರ್ಣ 811 ಚದರ ಮೀಟರ್ ಇದೆ. ಜನವರಿ 2015 ರಂದು ಖರೀದಿಸಲಾಯಿತು.

ಈ ಕಟ್ಟಡದ ನಿರ್ಮಾಣ ಕಾರ್ಯದ ವಿಸ್ತೀರ್ಣ 506 ಚದರ ಮೀಟರ್ ಇದೆ. ನಮಾಝ್‌ಗೋಸ್ಕರ (ಪ್ರಾರ್ಥನೆ) ಕೆಳಗಡೆ ಮತ್ತು ಮೇಲ್ಗಡೆ ಎರಡು ಸಭಾಂಗಣಗಳನ್ನು ನಿರ್ಮಿಸಲಾಗಿದೆ. ಒಂದು ಮಹಿಳೆಯರಿಗಾಗಿ ಇನ್ನೊಂದು ಪುರುಷರಿಗಾಗಿ, ಪ್ರತಿಯೊಂದರ ವಿಸ್ತೀರ್ಣ 65 ರಿಂದ 70 ಚದರ ಮೀಟರ್ ಇದೆ. ಅದಲ್ಲದೇ ದಿನನಿತ್ಯದ ಅಗತ್ಯಗಳಿಗಾಗಿ ಒಂದು ವಿವಿದ್ದೇಶಿತ ಕೊಠಡಿಯಿದೆ. ಒಂದು ಗ್ರಂಥಾಲಯವಿದೆ. ಮತ್ತು ಕಚೇರಿಗಳಿವೆ. ಒಂದು ಅಡುಗೆ ಕೋಣೆಯೂ ಇದೆ. ಮಸೀದಿಯ ಜೊತೆಯೇ ಒಂದು ಮೌಲ್ವಿ ಸಾಹೇಬರಿಗಾಗಿ ಮನೆ ನಿರ್ಮಿಸಲಾಗಿದೆ.

ಕೊನೆಯಲ್ಲಿ ಅಮೀರ್ ಸಾಹೇಬರು ಈ ನಗರದ ಆಡಳಿತ ವ್ಯವಸ್ಥಾಪಕರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಮಸೀದಿ ಕಾರ್ಯಗಳಲ್ಲಿ ಅವರು ಬಹಳಷ್ಟು ಸಹಕರಿಸಿದರು.

ಅಮೀರ್ ಸಾಹೇಬರ ಪರಿಚಯ ಭಾಷಣದ ನಂತರ Forstdt ನಗರದ ಮೇಯರ್ ಆದ Mr. Herbert Unger, ಅವರು ತಮ್ಮ ಪರಿಚಯ ಭಾಷಣ ನೀಡುತ್ತಾ ಹೇಳಿದರು. ನಾನು ಮೊಟ್ಟ ಮೊದಲಾಗಿ ಹುಝೂರೆ ಅನ್ವರ್ ಅವರ ಸೇವೆಯಲ್ಲಿ ಸಲಾಂ ಹೇಳುತ್ತೇನೆ ಮತ್ತು ಶುಭಾಗಮನವನ್ನು ಕೋರುತ್ತೇನೆ. ಅನಂತರ ಎಲ್ಲಾ ಉಪಸ್ಥಿತರಿಗೆ ಮತ್ತು ಜಮಾಅತ್ ಸದಸ್ಯರಿಗೆ ಸಲಾಂ ಹೇಳುತ್ತೇನೆ.

ಅನಂತರ ಅವರು ಹೇಳಿದರು. ಮಸೀದಿ ನಿರ್ಮಾಣ ಕಾರ್ಯವು ಬಹಳಷ್ಟು ದೀರ್ಘ ಸಮಯ ತೆಗೆದುಕೊಂಡಿದೆ. ಆದರೆ ಅದು ಈಗ ತುಂಬಾ ಉತ್ತಮವಾಗಿ ಪೂರ್ಣಗೊಂಡಿರುತ್ತದೆ. ಯಾವ ವ್ಯಕ್ತಿ ನನ್ನಂತೆಯೇ ಮಸ್ಜಿದ್ ನಿರ್ಮಿಸಲು ಎಲ್ಲಾ ಹಂತಗಳನ್ನು ಜೊತೆಯಾಗಿದ್ದರು. ಅಂದರೆ ಮಸೀದಿಯ ಯೋಜನೆ, ಅದರ ಖರ್ಚು ವೆಚ್ಚಗಳು, ನಗರ ಆಡಳಿತದಿಂದ ಕಟ್ಟಡ ನಿರ್ಮಾಣಕ್ಕಾಗಿ ಅನುಮತಿ ನಡೆಯುವುದರಿಂದ ಹಿಡಿದು ನಿರ್ಮಾಣ ಕಾರ್ಯದಿಂದ ಇಂದಿನ ಉದ್ಘಾಟನಾ ಸಮಾರಂಭದವರೆಗೆ ನಿಶ್ಚಿತವಾಗಿಯೂ ತಿಳಿದುಕೊಳ್ಳಬಹುದು. ಎಷ್ಟೊಂದು ಸಮಸ್ಯೆಗಳನ್ನು ಎದುರಿಸಬಹುದೆಂದು, ಇಲ್ಲಿ ಜಮಾಅತಿನ ಸದಸ್ಯರಿಗೆ ಎಷ್ಟು ಹಂತಗಳನ್ನು ದಾಟಬೇಕಾಯಿತೆಂದು ಇವೆಲ್ಲಾ ಕಷ್ಟಗಳನ್ನು ಮಸೀದಿಯ ಅಡಿಗಲ್ಲು ಹಾಕಿದ ನಂತರವೂ ಎದುರಿಸಬೇಕಾಯಿತು. ಅದು ಅಹ್ಮದಿಯಾ ಮುಸ್ಲಿಂ ಜಮಾಅತಿನ ಖಲೀಫರು ಸ್ವತಃ ಆಗಮಿಸಿ ಅಕ್ಟೋಬರ್ 2005 ರಂದು ಇಟ್ಟಿದ್ದರು.

ನಂತರ ಮೇಯರ್ ಸಾಹಿಬ್ ಹೇಳಿದರು. ನೀವೆಲ್ಲ ತಿಳಿದವರೇ ಆಗಿದ್ದೀರಿ. ನಾವು ನಗರ ಆಡಳಿತದಿಂದ ಈ ಪೈಕಿ ಕಿಂಚಿತ್ತೂ ಕಾಳಜಿಯಾಗಿರಲಿಲ್ಲ. ಆದರೂ ಪ್ಲಾಟಿನ ಮಾಲೀಕರು ಈ ಜಾಗ ಜಮಾಅತಿಗೆ ಮಸೀದಿ ನಿರ್ಮಾಣ ಮಾಡಲು ಮಾರಾಟ ಮಾಡಿದರು.

ಪ್ಲಾಟಿನ ಮಾಲೀಕರು ಈ ಜಾಗವನ್ನು ನಗರ ಆಡಳಿತಕ್ಕಾಗಲೀ ಅಥವಾ ಯಾವೊಬ್ಬ ದೊಡ್ಡ ಉದ್ಯಮಿಗಾಗಲೀ ಮಾರಾಟ ಮಾಡಲು ಇಚ್ಛಿಸಿರಲಿಲ್ಲ. ಬದಲು ಅಹ್ಮದಿಯಾ ಜಮಾಅತಿಗೆ ಮಸೀದಿ ನಿರ್ಮಾಣಕ್ಕಾಗಿ ಕೊಟ್ಟುಬಿಟ್ಟರು. ಅದಾಗ್ಯೂ ಇದೊಂದು ವಾಣಿಜ್ಯ ವಲಯವಾಗಿತ್ತು. ನಮ್ಮ ದೃಷ್ಟಿಯಲ್ಲಿ ಈ ಮಸೀದಿ Council Hall ಬಳಿ ಇರಬೇಕಾಗಿತ್ತು. ನಮಗೆ ಈ ಜಾಗ ಮಾರಾಟವಾದ ಸುದ್ದಿ ಸಿಕ್ಕಿದ ಮೇಲೆ ನಮಗೆ ಕಾನೂನು ರೀತ್ಯ ತಡೆಯಲು ಸಮಯ ಸಹ ಇರಲಿಲ್ಲ. ಆದರೆ ಇಂದು ನಮಗೆ ತುಂಬಾ ಸಂತೋಷವಾಗುತ್ತಿದೆ. ಒಂದು ದೀರ್ಘ ಸಮಯದ ನಂತರ, ಬಹಳಷ್ಟು ಶ್ರಮಪಟ್ಟ ನಂತರ ಈ ಮಸೀದಿ ನಿರ್ಮಾಣವಾಗಿದೆ.

ಜಮಾಅತಿನ ವರ್ಗವು ನಮ್ಮ ನಗರ ಆಡಳಿತದೊಂದಿಗೆ ತುಂಬಾ ಉತ್ತಮ ರೀತಿಯಲಿ ಸಹಕಾರ ನೀಡಿದೆ. ಹೀಗೆ ಒಂದು ಅತ್ಯಂತ ಸುಂದರವಾದ ಮಸೀದಿ ನಮ್ಮ ಸಾಮಾಜಿಕ ವಲಯದ ಮಧ್ಯ ಉಪಸ್ಥಿತವಿದೆ. ಇದೇ ರೀತಿ ಧರ್ಮಕಾರ್ಯಗಳಿಗಾಗಿ ಸಮಾಜದಲ್ಲಿ ಜಾಗ ಕೊಡಬೇಕಾಗಿದೆ.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.